# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES KANNADA DAILY NEWS PAPER

PRGI NO : KNKAN/26/A0482

ಸಂಪಾದಕರು: ಆನಂದಯ್ಯ ವಿರಕ್ತಮಠ | ಸಂಪುಟ: 01 ಸಂಚಿಕೆ: 42 ಪುಟಗಳು: 04 ಬೆಲೆ: 02 ರೂ. ದಿನಾಂಕ: 04-08-2026 ಮಂಗಳವಾರ | 73536 56555


**ಜನಶ್ರೀವಾಣಿ**

ಜನರಿಂದ ಮತ ಪಡೆದು ಹಿತ ಕಾಯಲಿಲ್ಲ, ಖುರ್ಚಿಗಾಗಿ ಮತದ ಮೌಲ್ಯವನ್ನೇ ಕಳೆವುದೆಂತು ಸರಿ..?

■ ಆನಂದಯ್ಯ ವಿರಕ್ತಮಠ
ಸಂಪಾದಕರು: ಜನಶ್ರೀ ಟೈಮ್ಸ್

## ಉಪಲೋಕಾಯುಕ್ತರ ಜಿಲ್ಲಾ ಪ್ರವಾಸ

ಜನಶ್ರೀ ಟೈಮ್ಸ್ ಸುದ್ದಿ

**ಗದಗ:** ಕರ್ನಾಟಕ ಉಪಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಗದಗ ಜಿಲ್ಲೆಯಲ್ಲಿ ಅಗಸ್ಟ 5 ರಿಂದ 7 ರವರೆಗೆ ಪ್ರವಾಸ ಕೈಗೊಳ್ಳಲಿದ್ದಾರೆ.

ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಅಗಸ್ಟ್ 5 ರಂದು ಮಧ್ಯಾಹ್ನ 3.20 ಗಂಟೆಗೆ ಬೆಂಗಳೂರಿನಿಂದ ವಿಮಾನ ಮೂಲಕ ಹೊರಟು ಸಂಜೆ 4.45 ಗಂಟೆಗೆ ಹುಬ್ಬಳ್ಳಿಗೆ ಆಗಮಿಸುವರು. ಸಂಜೆ 4.45 ರಿಂದ ಹುಬ್ಬಳ್ಳಿ ಏರಪೋರ್ಟದಿಂದ ಹೊರಟು 5.45 ಗಂಟೆಗೆ ಗದಗ ಜಿಲ್ಲೆಗೆ ಆಗಮಿಸಿ ವಾಸ್ತವ್ಯ ಮಾಡುವರು. ಅಗಸ್ಟ 6 ರಂದು ಬೆಳಗ್ಗೆ 9 ಗಂಟೆಯಿಂದ ಬೆಳಗ್ಗೆ 10 ಗಂಟೆಯವರೆಗೆ ಸಾರ್ವಜನಿಕ ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಭೆಯನ್ನು ಉದ್ಘಾಟಿಸುವರು. ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಸಾರ್ವಜನಿಕರ ದೂರು ಅರ್ಜಿ ಸ್ವೀಕರಿಸಿ ವಿಚಾರಣೆ ನಡೆಸುವರು. ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ ದಲ್ಲಿ ಸಾರ್ವಜನಿಕರಿಂದ ದೂರು/ ಅರ್ಜಿಗಳನ್ನು ವಿಚಾರಣೆ ನಡೆಸುವರು ನಂತರ ಗದಗನಲ್ಲಿ ವಾಸ್ತವ್ಯ ಮಾಡುವರು. ಅಗಸ್ಟ್ 7 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲೆಯ ಬಾಕಿ ಉಳಿದ ದೂರು ಅರ್ಜಿಗಳನ್ನು ವಿಚಾರಣೆ ನಡೆಸುವರು. ನಂತರ ಜಿಲ್ಲೆಯ ವಿವಿಧೆಡೆ ಭೇಟಿ ನೀಡಲಿದ್ದಾರೆ. ಸಂಜೆ 7.10 ಗಂಟೆಗೆ ಗದಗನಿಂದ ರೈಲು ಮೂಲಕ ಹೊರಟು ಬೆಂಗಳೂರಿಗೆ ಪ್ರಯಾಣ ಮಾಡುವರು ಎಂದು ಲೋಕಾಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

## ಗದಗ ವಿಧಾನಸಭಾ ಮತಕ್ಷೇತ್ರದ ಎಸ್.ಐ.ಆರ್. ವರದಿ

ಜನಶ್ರೀ ಟೈಮ್ಸ್ ಸುದ್ದಿ

**ಗದಗ:** ಜಿಲ್ಲೆಯ ಗದಗ ವಿಧಾನಸಭಾ ಮತಕ್ಷೇತ್ರದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದ್ದು ಬಿ.ಎಲ್.ಓಗಳು ಮನೆ ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಫಾರ್ಮಗಳನ್ನು ಮತದಾರರಿಗೆ ವಿತರಿಸುತ್ತಿದ್ದಾರೆ.

ಗದಗ ವಿಧಾನಸಭಾ ಮತಕ್ಷೇತ್ರದಲ್ಲಿ ಒಟ್ಟು 2,33,829 ಮತದಾರರು ಮತದಾರರ ಪಟ್ಟಿಯಲ್ಲಿದ್ದಾರೆ. 226 ಮತಗಟ್ಟೆಗಳಿವೆ. ಬಿ.ಎಲ್.ಓಗಳು ಆಗಸ್ಟ್ 08 ರವರೆಗೆ ಮನೆ ಮನೆಗೆ ಭೇಟಿ ನೀಡಿ ಎನ್ಯುಮರೇಷನ್ ಫಾರ್ಮ ವಿತರಿಸಲಿದ್ದಾರೆ. ಆಗಸ್ಟ್ 1 ರವರೆಗೆ 2,33,829 ಎನ್ಯುಮರೇಷನ್ ಫಾರ್ಮಗಳನ್ನು ವಿತರಿಸಲಾಗಿದೆ. 1,96,793 ಎನ್ಯುಮರೇಷನ್ ಫಾರ್ಮ ಡಿಜಟಲೀಕರಣಗೊಂಡಿವೆ ಎಂದು ಗದಗ ವಿಧಾನಸಭಾ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿ, ಗದಗ ಉಪವಿಭಾಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಪುಟ ಸೇರ್ಪಡೆ : ಹೈಕಮಾಂಡ್ ಹಾಗೂ ಸಿಎಂಗೆ ಧನ್ಯವಾದ ಸಲ್ಲಿಸಿದ ಹೆಚ್.ಸಿ.ಬಾಲಕೃಷ್ಣ



**ಬೆಂಗಳೂರು:** ರಾಜ್ಯ ಸರ್ಕಾರದ ನೂತನ ಸಚಿವರಾಗಲು ಅವಕಾಶ ಮಾಡಿಕೊಟ್ಟಿರುವ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನಿಯೋಜಿತ ನೂತನ ಸಚಿವ ಹೆಚ್.ಸಿ.ಬಾಲಕೃಷ್ಣ ಅವರು ಧನ್ಯವಾದಗಳನ್ನು ಸಲ್ಲಿಸಿದ್ದಾರೆ.

ಈ ಸಂಬಂಧ ಮಾಧ್ಯಮ ಹೇಳಿಕೆ ನೀಡಿರುವ ಅವರು, ನನ್ನ ಮೇಲೆ ವಿಶ್ವಾಸವಿಟ್ಟು, ಮಂತ್ರಿಯಾಗಲು ಅವಕಾಶ ನೀಡಿ ಹೊಸ ಜವಾಬ್ದಾರಿ ನೀಡಿರುವ ಪಕ್ಷದ ಹೈಕಮಾಂಡ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಡಿ.ಕೆ.ಸುರೇಶ್ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ. ಮಾಗಡಿ ರಂಗನಾಥಸ್ವಾಮಿ, ಮನೆ ದೇವರು ನರಸಿಂಹಸ್ವಾಮಿ, ಕಾಲಭೈರವೇಶ್ವರಸ್ವಾಮಿಯ ಆಶೀರ್ವಾದದಿಂದ ಸಚಿವ ಸ್ಥಾನ ದೊರೆತ್ತಿದೆ. ಹಳೇ ಮೈಸೂರು ಭಾಗದಲ್ಲಿ ನನಗೆ ಈ ಹೊಸ ಜವಾಬ್ದಾರಿ ವಹಿಸಿದ್ದು, ನಿಭಾಯಿಸಿಕೊಂಡು ಹೋಗುತ್ತೇನೆ. ಅಧಿಕಾರ ಇರಲಿ ಇರದಿರಲಿ ಮಾಗಡಿ ಕ್ಷೇತ್ರದ ಜನತೆ ನನ್ನ ಮೇಲೆ ವಿಶ್ವಾಸವಿಟ್ಟು ಐದು ಬಾರಿ ಚುನಾಯಿಸಿದ್ದಾರೆ. ಅವರಿಗೂ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಕ್ಷೇತ್ರದ ಜವಾಬ್ದಾರಿ ಹಾಗೂ ಸಚಿವ ಸ್ಥಾನದ ಜವಾಬ್ದಾರಿಯನ್ನು ಜೊತೆ ಜೊತೆಯಲ್ಲೇ ಕೊಂಡೊಯ್ಯುತ್ತೇನೆ ಎಂದು ಬಾಲಕೃಷ್ಣ ತಿಳಿಸಿದ್ದಾರೆ.


**ಜನಶ್ರೀ ಟೈಮ್ಸ್**

ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.


**ಬಯಸಿದ್ದು ಮಂತ್ರಿ ಪದವಿ, ಸಿಕ್ಕಿದ್ದು ಸ್ಪೀಕರ್ ಹುದ್ದೆ ॥ ಪ್ರಥಮ ಬಾರಿಗೆ ಗದಗ ಜಿಲ್ಲೆಗೆ ಸಾಂವಿಧಾನಿಕ ಸ್ಥಾನಮಾನ**

**ನಾಲ್ಕು ದಶಕಗಳ ಪಕ್ಷ ನಿಷ್ಠೆಗೆ ಒಲಿತು ದೊಡ್ಡ ಗೌರವ ॥ ರೋಣದ ಗೌಡ್ರು ವಿಧಾನಸಭೆ ಹೆಡ್ ಮಾಸ್ಟರ್**

# ವಿಧಾನಸಭೆ ಗದ್ದುಗೆ ಏರಿದ ರೋಣದ ಗೌಡರು

ಜನಶ್ರೀ ಟೈಮ್ಸ್ ಸುದ್ದಿ

**ಗದಗ:** ನಾಲ್ಕು ದಶಕಗಳಿಂದ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ, ನಾಲ್ಕು ಸಲ ಶಾಸಕರಾಗಿ, ಜಿಲ್ಲಾಧ್ಯಕ್ಷರಾಗಿ ಶ್ರಮಿಸಿದರೂ ಒಂದೇ ಒಂದು ಸಲ ಸಚಿವನಾಗಲಿಲ್ಲ ಎಂದು ಬಾಧಿಸುತ್ತಿದ್ದ ಕೊರಗು ಶಾಸಕ ಜಿ ಎಸ್ ಪಾಟೀಲರ ಮುಖದಲ್ಲಿದೆ. ಆದರೂ ಸಹ ವಿಧಾನಸಭೆ ಸಭಾಧ್ಯಕ್ಷ ಸ್ಥಾನದಂತಹ ಸಾಂವಿಧಾನಿಕ ಹುದ್ದೆ ಅರಸಿ ಬಂದಿದೆ. ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಪಕ್ಷಕ್ಕಾಗಿ ದುಡಿದವರನ್ನು, ಜೀವನವನ್ನೇ ಮುಡುಪಿಟ್ಟವರನ್ನು ಕೈಬಿಡಲ್ಲ ಎಂಬ ನಂಬಿಕೆ ರುಜುವಾತಾಗಿದೆ.

ಜಿ ಎಸ್ ಪಾಟೀಲ ಸಭ್ಯ, ಸರಳ ವ್ಯಕ್ತಿತ್ವದ ರಾಜಕಾರಣಿ. ನಾಲ್ಕು ದಶಕಗಳ ರಾಜಕಾರಣದ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಟ್ಟುಕೊಂಡವರಲ್ಲ. ಕೈ ಬಾಯಿ ಶುದ್ಧವಾಗಿಟ್ಟುಕೊಂಡು ಜನರ ಮಧ್ಯೆ ಜನನಾಯಕರಾಗಿ ಬೆಳೆದು ನಿಂತವರು. ಬಡವರು, ಶೋಷಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಹೀಗೆ ಸಮಾಜದ ಎಲ್ಲ ವರ್ಗದ ಜನರು ಇವರನ್ನು ಅಪ್ಪಿಕೊಂಡು, ಒಪ್ಪಿಕೊಂಡು 20 ವರ್ಷಗಳ ಕಾಲ ತಮ್ಮ ನಾಯಕನನ್ನು ಆಯ್ಕೆ ಮಾಡಿದ್ದು ಸಣ್ಣ ಮಾತಲ್ಲ. ಆದರೂ, ಸಹ ಮಂತ್ರಿಗಿರಿ ವಿಷಯಕ್ಕೆ ಬಂದಾಗಲೆಲ್ಲ ಪದೇ ಪದೇ ಅವಕಾಶ ವಂಚಿತರಾಗುತ್ತಿದ್ದರು. ಕಾರಣ ಎಲ್ಲರಿಗೂ ಗೊತ್ತಿರುವುದೇ, ಗದಗ ಶಾಸಕ ಎಚ್ ಕೆ ಪಾಟೀಲ ಸತತವಾಗಿ ಗೆಲುವು ಸಾಧಿಸುತ್ತಲೇ ಬಂದಿದ್ದಲ್ಲದೇ, ರಾಜಕೀಯ ವಲಯದಲ್ಲಿ ಪ್ರಭಾವಿ ರಾಜಕಾರಣಿಯಾಗಿದ್ದರಿಂದ ಪ್ರತಿ ಸಲವೂ ಅವರೆ ಸಚಿವರಾಗುತ್ತಿದ್ದರು. ಇದರಿಂದ ಜಿ ಎಸ್ ಪಾಟೀಲ ಮತ್ತೆ ಮತ್ತೆ ಸಚಿವ ಸ್ಥಾನದಿಂದ ವಂಚಿತರಾಗುತ್ತಿದ್ದರು. ಆದರೆ, ಈ ಸಲ ಮಾತ್ರ ಜಿ ಎಸ್ ಪಾಟೀಲ ಅವರಿಗೆ ಸಚಿವರಾಗಬೇಕೆಂಬ ಹಂಬಲ ಜಾಸ್ತಿಯಾಯಿತು. ಇದಕ್ಕೆ ಕಾರಣ ಅವರ ಅಭಿಮಾನಿ ಮತ್ತು ಕ್ಷೇತ್ರದ ಕಾರ್ಯಕರ್ತರು ಬಿಡದೇ ತಮ್ಮ ನಾಯಕರಿಗೆ ದುಂಬಾಲು ಬಿದ್ದರು. ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದಾಯ್ತು, ಹೈಕಮಾಂಡ್ ಗಮನಕ್ಕೆ ತರಲು ಕಾರ್ಯಕರ್ತರ ನೇತೃತ್ವದಲ್ಲಿ ತುಮಕೂರಿನಿಂದ ಬೆಂಗಳೂರುವರೆಗೆ ಪಾದಯಾತ್ರೆ ಮಾಡಲಾಯಿತು. ಅಲ್ಲದೇ, ಕ್ಷೇತ್ರದಾದ್ಯಂತ ಕಾರ್ಯಕರ್ತರು ಉರುಳು ಸೇವೆ ಹರಕೆ ಹೊತ್ತುಕೊಳ್ಳುವುದು ಹೀಗೆ ವಿವಿಧ ಪೂಜೆ ಪುನಸ್ಕಾರಗಳ ಮೂಲಕ ದೇವರ ಮೊರೆ ಹೋದರು. ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರ ಕೃಪಾಕಟಾಕ್ಷ ಮತ್ತು ದೇವರ ಆಶೀರ್ವಾದ ಮತ್ತು ಜನರ ಹರಕೆ ಸೇರಿ ರೋಣದ ಗೌಡರಿಗೆ ಸಾಂವಿಧಾನಿಕ ಸ್ಥಾನ ಅಲಂಕರಿಸಿ ಸೇವೆ ಸಲ್ಲಿಸುವ ಸುಯೋಗ ಕೂಡಿ ಬಂದಿದೆ. ಜಿ ಎಸ್ ಪಾಟೀಲ ಅವರಿಗೆ ಸ್ಪೀಕರ್ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ ಎಂಬ ಮಾಹಿತಿ ದೆಹಲಿಯಿಂದ ಗೊತ್ತಾದ ಮೇಲೆ ರೋಣ ಕ್ಷೇತ್ರದಲ್ಲಿ ಸಂಭ್ರಮ ಮನೆ ಮಾಡಿದೆ. ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಅಭಿಮಾನಿಗಳು, ಕಾರ್ಯಕರ್ತರು ಸಂಭ್ರಮಾಚರಣೆಯಲ್ಲಿ ತೊಡಗಿದ್ದಾರೆ.



### ಕೊಟ್ಟ ಮಾತು ಉಳಿಸಿಕೊಂಡ ನಾಯಕರು

2023ರ ವಿಧಾನಸಭೆ ಚುನಾವಣೆ ಸಮಯದಲ್ಲಿ ರೋಣ ಕ್ಷೇತ್ರಕ್ಕೆ ಆಗಮಿಸಿದ್ದ ಹಾಲಿ ಸಿಎಂ ಡಿಕೆ ಶಿವಕುಮಾರ್ ಮತ್ತು ನಿಕಟಪೂರ್ವ ಸಿಎಂ ಸಿದ್ದರಾಮಯ್ಯ ಅವರು ಈ ಸಲ ಜಿ ಎಸ್ ಪಾಟೀಲ ಅವರನ್ನು ಗೆಲ್ಲಿಸಿದರೆ ಅವರಿಗೆ ಉನ್ನತ ಸ್ಥಾನ ನೀಡಲಾಗುವುದು ಎಂದು ಕ್ಷೇತ್ರದ ಜನರಿಗೆ ಮಾತು ಕೊಟ್ಟಿದ್ದರು. ಇದೀಗ ಸಭಾಧ್ಯಕ್ಷ ಸ್ಥಾನ ನೀಡುವ ಮೂಲಕ ನಾಯಕರುಗಳು ತಮ್ಮ ಮಾತು ಉಳಿಸಿಕೊಂಡಿದ್ದಾರೆ. ಇದಲ್ಲದೇ, ಇತ್ತೀಚೆಗೆ ಜಿ ಎಸ್ ಪಾಟೀಲ ಅವರು ತುಮಕೂರಿನಿಂದ ಬೆಂಗಳೂರುವರೆಗೆ ಹಮ್ಮಿಕೊಂಡಿದ್ದ ಪಾದಯಾತ್ರೆ ಪೂರ್ಣಗೊಂಡ ಮೇಲೆ ಸಾವಿರಾರು ಕಾರ್ಯಕರ್ತರು ಬೆಂಗಳೂರಿನ ಕೆಪಿಸಿಸಿ ಕಚೇರಿಗೆ ತೆರಳಿ ಸಿಎಂ ಡಿ ಕೆ ಶಿವಕುಮಾರ್ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ ಕೆ ಹರಿಪ್ರಸಾದ್ ಅವರನ್ನು ಭೇಟಿ ಮಾಡಿ ಜಿ ಎಸ್ ಪಾಟೀಲ ಅವರನ್ನು ಮಂತ್ರಿ ಮಾಡಿ ಎಂದು ಮನವಿ ಸಲ್ಲಿಸಿದರು. ಜಿ ಎಸ್ ಪಾಟೀಲ ಅವರ ಅನುಭವ, ಪಕ್ಷ ನಿಷ್ಠೆ ನಮಗೆ ಗೊತ್ತಿದೆ. ಪಕ್ಷಕ್ಕಾಗಿ ಅವರು ಮಾಡಿರುವ ಸೇವೆ ಅಪಾರವಾಗಿದೆ. ಹೀಗಾಗಿ ಅವರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ. ಹೈಕಮಾಂಡ್ ಗಮನಕ್ಕೆ ತಂದು ಈ ಸಲ ಉನ್ನತ ಅವಕಾಶ ಮಾಡಿಕೊಡಲಾಗುವುದು ಎಂದು ಉಭಯ ನಾಯಕರು ಅಭಯ ನೀಡಿದ್ದು ಇಲ್ಲಿ ನೆನಪಿಸಿಕೊಳ್ಳುವ ಸಂಗತಿಯಾಗಿದೆ.

### ಗುರಿ ಮುಟ್ಟಿದ ಗುರುಪಾದಗೌಡರು

ಜಿ ಎಸ್ ಪಾಟೀಲ ಅವರು ಮಂತ್ರಿಯಾಗಿದ್ದರೆ ಯಾವುದೇ ಖಾತೆಯನ್ನೂ ನೀಡಿದರೂ ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡುವಂತಹ ಚಾಕಚಕ್ಯತೆ ಅವರಲ್ಲಿತ್ತು. ನಾಲ್ಕು ದಶಕಗಳ ರಾಜಕೀಯ ಅನುಭವ ಅವರನ್ನು ಪರಿಪೂರ್ಣ ರಾ ಕಾರಣಿಯನ್ನಾಗಿಸಿದೆ. ಬಯಸಿದ್ದು ಸಿಗಲಿಲ್ಲ, ಸಿಕ್ಕಿರುವ ಸ್ಥಾನಕ್ಕೆ ನ್ಯಾಯ ಒದಗಿಸುವ ದಕ್ಷತೆ ಅವರಲ್ಲಿದೆ. 40 ವರ್ಷಗಳ ಸಾರ್ವಜನಿಕ ಸೇವಾ ಅನುಭವದಿಂದ ವಿಧಾನಸಭೆ ನಾವಿಕರಾಗಿ ಅತ್ಯಂತ ಅಚ್ಚುಕಟ್ಟಾಗಿ ಸದನವನ್ನು ನಿಭಾಯಿಸುತ್ತಾರೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಜಿ ಎಸ್ ಪಾಟೀಲ ಅವರು ಮಂತ್ರಿಗಿರಿ ಜತೆಗೆ ಗದಗ ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಕಾರ್ಯನಿರ್ವಹಿಸಬೇಕು ಎಂಬುದು ಅವರ ಅಭಿಮಾನಿಗಳ ಆಸೆ ಆಗಿತ್ತು. ಆದರೆ. ಅದಕ್ಕಿಂತ ಒಂದೆಜ್ಜೆ ಮುಂದಿರುವಂತಹ ಸಭಾಧ್ಯಕ್ಷ ಸ್ಥಾನ ಸಿಕ್ಕಿರುವುದು ಕ್ಷೇತ್ರದ ಜನರಿಗೆ ಖುಷಿ ತಂದಿದೆ. ಒಟ್ಟಾರೆ ರೋಣದ ಗೌಡರು ಗಮ್ಯ ತಲುಪಿ ಗುರಿ ಮುಟ್ಟಿದ ಗೌಡರು ಎಂಬ ಹೆಮ್ಮೆಗೆ ಪಾತ್ರರಾಗಿದ್ದಾರೆ.

**ಜನಶ್ರೀ ಟೈಮ್ಸ್ ವಿಶೇಷ**

### ವೈಯಕ್ತಿಕ ವಿವರ

ಗುರುಪಾದಗೌಡ ಸಂಗನಗೌಡ ಪಾಟೀಲ ಅವರು 1948 ಏಪ್ರಿಲ್ 10ರಂದು ಜನಿಸಿದರು. ಸಂಗನಗೌಡ ಮತ್ತು ಬಸಮ್ಮ ಇವರ ತಂದೆ ತಾಯಿಯಾಗಿದ್ದಾರೆ. ಜಿ ಎಸ್ ಪಾಟೀಲ ಅವರು ಧಾರವಾಡದ ಸೆಂಟ್ ಜೋಸೆಫ್ ಹೈಸ್ಕೂಲ್ ಹೈಸ್ಕೂಲ್, ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಬಿಎಸ್ಸಿ ಪೂರ್ಣಗೊಳಿಸಿದರು. ಪಾಟೀಲರು ಉತ್ತಮ ಕ್ರೀಡಾಪಟು ಕ್ರಿಕೆಟ್‌ನಲ್ಲಿ ವಿಕೆಟ್ ಕೀಪರ್–ಆರಂಭಿಕ ಬ್ಯಾಟ್ಸಮನ್ ಆಗಿದ್ದರಲ್ಲದೇ, ರಾಜ್ಯಮಟ್ಟದ ತಂಡದಲ್ಲಿ ಕರ್ನಾಟಕ ಪರ ಆಡಿದವರಾಗಿದ್ದಾರೆ. ಮಾಜಿ ಸಂಸದ ರುದ್ರಗೌಡ, ವೀರಭದ್ರಗೌಡ, ಈಶ್ವರಗೌಡ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿ ಬಿ ಎಸ್ ಪಾಟೀಲ ಇವರ ಸಹೋದರರಾಗಿದ್ದಾರೆ. ಅನ್ನಪೂರ್ಣ ಸರದೇಸಾಯಿ, ಶಶಿಕಲಾ ಆಯ್.ಆರ್. ಚಂದ್ರಶೇಖರ ಇವರ ಸಹೋದರಿಯರಾಗಿದ್ದಾರೆ. 1974 ಜೂನ್ 14 ಅನ್ನಪೂರ್ಣಾದೇವಿ ಅವರನ್ನು ಮದುವೆಯಾದರು. ಹಿರಿಯ ಪುತ್ರ ಡಾ. ಪ್ರಶಾಂತ, ದ್ವಿತೀಯ ಪುತ್ರ ಮಿಥುನ್ (ಸಂಗನಗೌಡ) ಹಾಗೂ ಪುತ್ರಿ ವರ್ಷಾ ಇವರ ಮಕ್ಕಳಾಗಿದ್ದಾರೆ.

## ಅಂತರಾಷ್ಟ್ರೀಯ ಅಂಚೆ ಸೇವೆ ಇನ್ನು ಗ್ರಾಮೀಣ ಅಂಚೆ ಕಚೇರಿಗಳಲ್ಲೂ ಲಭ್ಯ

ಜನಶ್ರೀ ಟೈಮ್ಸ್ ಸುದ್ದಿ

**ಗದಗ:** ಗ್ರಾಹಕರ ಅನುಕೂಲತೆ ಹೆಚ್ಚಿಸುವ ಹಾಗೂ ಅಂತರಾಷ್ಟ್ರೀಯ ಅಂಚೆ ಸೇವೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಅಂಚೆ ಇಲಾಖೆಯು ಗದಗ ಅಂಚೆ ವಿಭಾಗದ 26 ಉಪ ಅಂಚೆ ಕಚೇರಿಗಳು ಹಾಗೂ 141 ಶಾಖಾ ಅಂಚೆ ಕಚೇರಿಗಳಿಗೆ ಅಂತರಾಷ್ಟ್ರೀಯ ಅಂಚೆ ವಸ್ತುಗಳ ಬುಕ್ಕಿಂಗ್ ಸೌಲಭ್ಯವನ್ನು ವಿಸ್ತರಿಸಿದೆ.

ಇದುವರಿಗೆ ಅಂತರಾಷ್ಟ್ರೀಯ ಅಂಚೆ ವಸ್ತುಗಳನ್ನು ಬುಕ್ ಮಾಡಲು ಗ್ರಾಹಕರು ನಿಗದಿತ ಮುಖ್ಯ ಅಂಚೆ ಕಚೇರಿಗಳಿಗೆ ತೆರಳಬೇಕಾಗಿತ್ತು. ಇದೀಗ ಉಪ ಹಾಗೂ ಶಾಖಾ ಅಂಚೆ ಕಚೇರಿಗಳಿಗೂ ಈ ಸೌಲಭ್ಯ ವಿಸ್ತಾರಿಸುವದರಿಂದ, ಸಾರ್ವಜನಿಕರು ತಮ್ಮ ವಾಸಸ್ಥಳ ಅಥವಾ ವ್ಯಾಪಾರ ಸ್ಥಳಕ್ಕೆ ಸಮೀಪದಲ್ಲಿರುವ ಅಂಚೆ ಕಚೇರಿಗಳಲ್ಲಿಯೇ ಅಂತರಾಷ್ಟ್ರೀಯ ಅಂಚೆ ಸೇವೆ ಪಡೆಯಬಹುದಾಗಿದೆ. ವಿಸ್ತರಿಸಿದ ಸೌಲಭ್ಯದಡಿ ಅಂತರಾಷ್ಟ್ರೀಯ ಸ್ಪೀಡ್ ಪೋಸ್ಟ್, ಅಂತರಾಷ್ಟ್ರೀಯ ಟ್ರ್ಯಾಕ್ಡ್ ಪ್ಯಾಕೆಟ್ ಸೇವೆ ಹಾಗೂ ಅಂತರಾಷ್ಟ್ರೀಯ ಏರ್ ಪಾರ್ಸೆಲ್ ಸೇವೆಗಳನ್ನು ಬಳಸಿಕೊಳ್ಳಬಹುದಾಗಿದೆ. ಇದರಿಂದ ವಿದೇಶಿಗಳಿಗೆ ದಾಖಲೆಗಳು, ಪಾಕೇಟ್ ಗಳು ಹಾಗೂ ಪಾರ್ಸೆಲ್ ಗಳನ್ನು ಕಳುಹಿಸುವ ವಿದ್ಯಾರ್ಥಿಗಳು, ವ್ಯಾಪಾರಿಗಳು, ರಫ್ತುದಾರರು, ವೃತ್ತಿಪರರು ಸೇರಿದಂತೆ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಿದೆ. ದೂರದ ಮುಖ್ಯ ಅಂಚೆ ಕಚೇರಿಗಳಿಗೆ ತೆರಳುವ ಅಗತ್ಯ ಕಡಿಮೆಯಾಗುವದರೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿಯೂ ವಿಶ್ವಾಸಾರ್ಹ ಅಂತರಾಷ್ಟ್ರೀಯ ಅಂಚೆ ಸೇವೆಗಳು ಸುಲಭವಾಗಿ ಲಭ್ಯವಾಗಲಿವೆ. ಅಂಚೆ ಇಲಾಖೆಯ ಈ ಕ್ರಮದಿಂದ ಅಂತರಾಷ್ಟ್ರೀಯ ಅಂಚೆ ಸೇವೆಯ ವ್ಯಾಪ್ತಿ ಮತ್ತಷ್ಟು ವಿಸ್ತರಿಸಿದಂತಾಗಿದೆ. 2026ರ ಏಪ್ರಿಲ್ ರಿಂದ ಗದಗ ಅಂಚೆ ವಿಭಾಗೀಯದಲ್ಲಿ ಒಟ್ಟು 70 ಅಂತರಾಷ್ಟ್ರೀಯ ಅಂಚೆ ವಸ್ತುಗಳನ್ನು ಇಂಡಿಯಾ ಪೋಸ್ಟ್ ಮೂಲಕ ಬುಕ್ ಮಾಡಿ ರವಾನಿಸಲಾಗಿದೆ. ಇದು ಅಂತರಾಷ್ಟ್ರೀಯ ಅಂಚೆ ಸೇವೆಗಳ ಮೇಲಿನ ಸಾರ್ವಜನಿಕರ ಹೆಚ್ಚುತ್ತಿರುವ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಅಂಚೆ ಇಲಾಖೆ ತಿಳಿಸಿದೆ. ಅಂತರಾಷ್ಟ್ರೀಯ ಅಂಚೆ ಬುಕ್ಕಿಂಗ್ ಸೌಲಭ್ಯ ಲಭ್ಯವಿರುವ ಕುರಿತು ಹೆಚ್ಚಿನ ಮಾಹಿತಗಾಗಿ ಸಾರ್ವಜನಿಕರು ತಮ್ಮ ಸಮೀಪದ ಉಪ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದು ಅಲ್ಲದೆ, ಗೂಗಲ್ ಪ್ಲೇ ಸ್ಟೋರಿನಲ್ಲಿ ಲಭ್ಯವಿರುವ ಆ?ಯಪ್ ನ್ನು ಡೌನ್ಲೋಡ್ ಮಾಡಿಕೊಳ್ಳಬದು ಎಂದು ಗದಗ ವಿಭಾಗೀಯ ಅಂಚೆ ಅಧೀಕ್ಷಕರಾದ ಎಸ್.ಎಸ್.ಶಿರಹಟ್ಟಿ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

## ಶಿಷ್ಯವೇತನಕ್ಕೆ ಅರ್ಜಿ ಆಹ್ವಾನ

ಜನಶ್ರೀ ಟೈಮ್ಸ್ ಸುದ್ದಿ

**ಗದಗ:** ಧಾರವಾಡ, ಹಾವೇರಿ, ಗದಗ, ಬಳ್ಳಾರಿ, ಹಾಗೂ ವಿಜಯನಗರ, ಜಿಲ್ಲೆಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿಗಾಗಿ ಒಂದನೇ ತರಗತಿಯಿಂದ ಅಂತಿಮ ಪದವಿ/ಡಿಪ್ಲೋಮಾ ಮತ್ತು ವೃತ್ತಿಪರ ಪದವಿವರೆಗೆ ಕರ್ನಾಟಕದಲ್ಲಿರುವ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ವಿಧ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕದ ಮೂಲನಿವಾಸಿ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನ ಮಂಜೂರು ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಜಂಟಿ ನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಧಾರವಾಡ ಇವರಿಂದ ಪಡೆಯಬಹುದು. ಒಂದನೇ ತರಗತಿಯಿಂದ ಅಂತಿಮ ವರ್ಷದ ಪದವಿ/ಡಿಪ್ಲೋಮಾ ವರೆಗೆ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಅಕ್ಟೋಬರ್ 31 ಹಾಗೂ ವೃತ್ತಿಪರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಅರ್ಜಿಗಳನ್ನು ಸ್ವೀಕರಿಸಲು ನವಂಬರ್ 30 ಕೊನೆಯ ದಿನವಾಗಿದೆ. ಮಾಹಿತಿಗಾಗಿ ಜಂಟಿ ನಿರ್ದೇಶಕರ ಕಾರ್ಯಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಧಾರವಾಡ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ರೈತರ ಜೀವನದಲ್ಲಿ ಜಾನುವಾರುಗಳ ಪಾತ್ರ ಮುಖ್ಯ : ಹಿರೇಗೌಡ್ರ

ಜನಶ್ರೀ ಟೈಮ್ಸ್ ಸುದ್ದಿ

**ಗದಗ:** ಹಾಲು ಉತ್ಪಾದಕರಿಂದ ರೈತರ ಜೀವನದಲ್ಲಿ ಜಾನುವಾರುಗಳು ಪ್ರಮುಖ ಪಾತ್ರವಹಿಸುತ್ತವೆ. ಹಸು, ಎಮ್ಮೆ, ಕುರಿ ಮತ್ತು ಮೇಕೆಗಳು ಹಾಲು, ಗೊಬ್ಬರ ಹಾಗೂ ಆದಾಯದ ಪ್ರಮುಖ ಮೂಲಗಳಾಗಿವೆ. ಅವುಗಳ ಆರೋಗ್ಯವನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಂಡಳ ನಿರ್ದೇಶಕ ಎಚ್. ಜಿ. ಹಿರೇಗೌಡ್ರ ಹೇಳಿದರು.

ನರಗುಂದ ತಾಲೂಕು ಪಂಚಾಯಿತಿಯಲ್ಲಿ ಸಹಕಾರ ಇಲಾಖೆ, ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್, ಧಾರವಾಡ, ಗದಗ ಮತ್ತು ಉತ್ತರ ಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಆಶ್ರಯದಲ್ಲಿ ನರಗುಂದ ತಾಲೂಕಿನ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಹಾಲು ಪರೀಕ್ಷಕರಿಗೆ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದರು. ಜಾನುವಾರುಗಳಲ್ಲಿ ಕಾಲುಬಾಯಿ ರೋಗ, ಗಂಟಲುಬಾಜೆ, ಕಪ್ಪು ಕಾಲು, ಬ್ರೂಸೆಲ್ಲೋಸಿಸ್, ಚರ್ಮಗಂಟು ರೋಗ ಜಂತುಹುಳು ಸೋಂಕು ಹಾಗೂ ಕೆಚ್ಚಲು ಉರಿಯೂತ ಮೊದಲಾದ ರೋಗಗಳು ಕಾಣಿಸಿಕೊಳ್ಳುತ್ತವೆ. ಈ ರೋಗಗಳಿಂದ ಹಾಲಿನ ಉತ್ಪಾದನೆ ಕಡಿಮೆಯಾಗುವುದು, ಜಾನುವಾರುಗಳು ದುರ್ಬಲವಾಗುವುದು ಮತ್ತು ಕೆಲವೊಮ್ಮೆ ಸಾವಿಗೂ ಕಾರಣವಾಗಬಹುದು. ಇದರಿಂದ ರೈತರಿಗೆ ಆರ್ಥಿಕ ನಷ್ಟ ಉಂಟಾಗುತ್ತದೆ, ಆದ್ದರಿಂದ ರೋಗಗಳನ್ನು ತಡೆಗಟ್ಟಲು ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು ಎಂದರು.



ಪಶುಗಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಹಾಕಿಸಬೇಕು. ಪಶುವೈದ್ಯರ ಸಲಹೆಯಂತೆ ಜಂತುಹುಳು ನಿವಾರಣೆ ಮಾಡಿಸಬೇಕು. ಗೋಶಾಲೆಯನ್ನು ಸ್ವಚ್ಛವಾಗಿಟ್ಟುಕೊಂಡು ಶುದ್ಧ ಕುಡಿಯುವ ನೀರು ಹಾಗೂ ಸಮತೋಲನ ಆಹಾರವನ್ನು ನೀಡಬೇಕು. ಅನಾರೋಗ್ಯದ ಲಕ್ಷಣಗಳು ಕಂಡುಬಂದ ತಕ್ಷಣ ಪಶುವೈದ್ಯರನ್ನು ಸಂಪರ್ಕಿಸಬೇಕು. ಹೊಸದಾಗಿ ಖರೀದಿಸಿದ ಪಶುಗಳನ್ನು ಕೆಲವು ದಿನ ಪ್ರತ್ಯೇಕವಾಗಿಟ್ಟ ನಂತರವೇ ಇತರ ಪಶುಗಳೊಂದಿಗೆ ಸೇರಿಸಬೇಕು ಎಂದು ಹೇಳಿದರು.

ನರಗುಂದ ತಾಲೂಕಿನ ವಿಸ್ತರಣಾಧಿಕಾರಿ ಡಿ. ಆಯ್. ನದಾಫ ರವರು ಪ್ರಾಸ್ತಾವಿಕವಾಗಿ ಮಾತನಾಡಿ, ನರಗುಂದ ತಾಲೂಕಿನಲ್ಲಿ ಒಟ್ಟು 31 ಗ್ರಾಮಗಳಿದ್ದು 24 ಕಾರ್ಯನಿರತ ಸಹಕಾರ ಸಂಘಗಳಿವೆ. ಮಹಿಳಾ ಸಹಕಾರ ಸಂಘಗಳು 11, 13 ಸಾಮಾನ್ಯ ಸಂಘಗಳು ಇದ್ದು 5 ಗ್ರಾಮಗಳಲ್ಲಿ ಇನ್ನು ಸಂಘ ರಚಣೆಯಾಗಬೇಕಾಗಿದೆ. 3 ಬಿ.ಎಂ.ಸಿ ಗಳಿವೆ, ತಾಲೂಕಿನಲ್ಲಿ ಒಟ್ಟು 2011 ಪುರುಷ ಸದಸ್ಯರಿದ್ದು, 2928 ಮಹಿಳಾ ಸದಸ್ಯರ ಪೈಕಿ 1230 ಸದಸ್ಯರು ಹಾಲು ಪೂರೈಸುತ್ತಿದ್ದಾರೆ, ಪ್ರತಿದಿನ ಸರಾಸರಿ 7414 ಲೀಟರ ಹಾಲು ಶೇಖರಣೆ ಮಾಡಲಾಗುತ್ತಿದೆ, ಇತರೆ ಸಂಘದಿಂದ 5515 ಲೀ, ಮಹಿಳಾ ಸಂಘದಿಂದ 1899 ಲೀ ಶೇಖರಿಸಲಾಗುತ್ತಿದೆ. ಸರಾಸರಿ 4.3 ಫ್ಯಾಟ್, ಸರಾಸರಿ 35.01 ಪ್ರತಿ ಲೀಟರ್ ಗೆ ನೀಡಲಾಗುತ್ತಿದೆ ಎಂದರು. ಕಳೆದ ವರ್ಷದ ಹಾಲು ಶೇಖರಣೆ ಹೆಚ್ಚಾಗಿದ್ದು, ಶೇ 99.95 ಗುಣಮಟ್ಟ ಹೊಂದಿವೆ. ಪ್ರತಿದಿನ ಸರಾಸರಿ ಸ್ಥಳಿಯ ಹಾಲು ಮಾರಾಟ 227.0 ಸೇರಿಸಿ 7037 ಇದೆ, ಕೃತಕ ಗರ್ಭಧಾರಣೆ ಸೌಲಭ್ಯ ಇರುವ 12 ಸಂಘಗಳಿವೆ, ಪ್ರತಿ ತಿಂಗಳಿಗೆ ಸರಾಸರಿ 400 ಕರುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗುತ್ತದೆ. ಪ್ರತಿ ತಿಂಗಳಿನಲ್ಲಿ ಸರಾಸರಿ 20 ಕರುಗಳ ಜನನವಾಗುತ್ತದೆ, ಪ್ರತಿ ತಿಂಗಳು 30000 ಕೆ.ಜಿ. ಪಶು ಆಹಾರ ಬಳಕೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಧಾರವಾಡ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಡಿ. ಟಿ. ಕಳಸದ ಮಾತನಾಡಿ, ಪ್ರತಿ ದಿನ ರಾಜ್ಯದಲ್ಲಿ 1 ಕೋಟಿ 17 ಲಕ್ಷ ಹಾಲು ಉತ್ಪಾದನೆಯಾಗುತ್ತದೆ. 16 ಒಕ್ಕೂಟಗಳಲ್ಲಿ ಧಾರವಾಡ ಹಾಲು ಒಕ್ಕೂಟ ಮೊದಲ ಸ್ಥಾನದಲ್ಲಿದೆ, ಕಾರ್ಯದರ್ಶಿಗಳಿಗೆ ಹೆಚ್ಚು ಹಾಲು ಉತ್ಪಾದನೆ ಹಾಗೂ ಪಶು ಆಹಾರ ಬಳಕೆ ಮಾಡುವ ಸಲುವಾಗಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ ಎಂದರು. ಕೊಣ್ಣೂರ ಹಾಲು ಉತ್ಪಾದರ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಐ. ಎನ್. ಮೂಲಿಮನಿ, ಸಮುದಾಯ ಆರೋಗ್ಯ ಅಧಿಕಾರಿ ಡಾ.ಎಂ. ಬಿ. ಕಡಕೋಳ ಹಾಗೂ ಆರ್. ಬಿ. ವಾಲ್ಮೀಕಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸುರಕೋಡ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಸ್. ಜಿ. ಚಿಕ್ಕಮಠ ಮಾತನಾಡಿ, ಸಮಾಜದಲ್ಲಿ ಆರ್ಥಿಕವಾಗಿ ಅಬಲರಾದವರು, ಅವಕಾಶ ವಂಚಿತ ಜನರಿದ್ದು, ಇಂತಹ ಜನರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಯನ್ನು ಉತ್ತಮಗೊಳಿಸಲು ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಮಾತ್ರ ಸಾಧ್ಯ, ಗ್ರಾಮೀಣ ಪ್ರದೇಶದ ಮಹಿಳೆಯರು ಸಂಘಟಿತರಾಗಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮ ಆರ್ಥಿಕ ಅಭಿವೃದ್ಧಿಯನ್ನು ಹೊಂದಲು ಪ್ರಯತ್ನಿಸಿಬೇಕು ಎಂದರು.

ಕಾರ್ಯಕ್ರಮದಲ್ಲಿ ನರಗುಂದ ತಾಲೂಕಾ ಸಹಕಾರ ಅಭಿವೃದ್ಧಿ ಅಧಿಕಾರಿ ಪ್ರಕಾಶ ನವಲಗುಂದ, ಧಾರವಾಡ ಹಾಲು ಒಕ್ಕೂಟದ ವ್ಯವಸ್ಥಾಪಕ ರಾಕೇಶ ತಲ್ಲೂರ, ಧಾರವಾಡ ಹಾಲು ಒಕ್ಕೂಟದ ಜಿಲ್ಲಾ ಮುಖ್ಯಸ್ಥ ಪ್ರಸನ್ನ ಪಟ್ಟೇದ, ಕೊಣ್ಣೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷೆ ನೀಲಮ್ಮ ಎಲ್. ಪಾಟೀಲ ಉಪಸ್ಥಿತರಿದ್ದರು. ತರಬೇತಿ ಕಾರ್ಯಾಗಾರದಲ್ಲಿ ತರಬೇತಿ ಕಾರ್ಯಾಗಾರದಲ್ಲಿ ಜಾನುವಾರ ರೋಗಗಳು ಮತ್ತು ಹತೋಟಿ ಕ್ರಮಗಳ ಕುರಿತು, ಡಾ. ವಿರೇಶ ಎಸ್. ತರಲಿ, ಹೈನಾಭಿವೃದ್ಧಿಯಲ್ಲಿ ಹಸಿರು ಮೇವಿನ ಮಹತ್ವ ಕುರಿತುಮಹಾಂತೇಶ ಮೂಲಿಮನಿ, ಶುದ್ಧ ಹಾಗೂ ಅಧಿಕ ಹಾಲು ಉತ್ಪಾದನೆ ಕುರಿತು ಡಾ. ಎಂ. ಬಿ. ಮಡಿವಾಳರ ಉಪನ್ಯಾಸ ನೀಡಿದರು.

## ಸಾರ್ವಜನಿಕವಾಗಿ ಕಾಣಿಸಿಕೊಂಡ ಬಂಧಿತ ಆಂಗ್ ಸಾನ್ ಸೂ ಕಿ



ಬ್ಯಾಂಕಾಕ್: ಮ್ಯಾನ್ಮಾರ್‌ನ ಬಂಧಿತ ಮಾಜಿ ನಾಯಕಿ ಆಂಗ್ ಸಾನ್ ಸೂ ಕಿ ಇದೇ ಮೊದಲ ಬಾರಿಗೆ ಸಾರ್ವಜನಿಕರಾಗಿ ಕಾಣಿಸಿಕೊಂಡಿದ್ದಾರೆ.ರಾಜಧಾನಿಯಲ್ಲಿ ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿಯ ಪ್ರತಿನಿಧಿಯನ್ನು ಸೂ ಕಿ ಭೇಟಿಯಾದರು ಎಂದು ಮಿಲಿಟರಿ ಬೆಂಬಲಿತ ಸರ್ಕಾರ ಹೇಳಿದೆ, ನೊಬೆಲ್ ಪ್ರಶಸ್ತಿ ವಿಜೇತರಿಗೆ ಹೊರಗಿನ ಪ್ರಪಂಚದೊಂದಿಗೆ ಸಂಪರ್ಕದ ಅಪರೂಪದ ಕ್ಷಣ ಇದಾಗಿದೆ.

2021 ರಲ್ಲಿ ಮಿಲಿಟರಿ ಅಧಿಕಾರವನ್ನು ವಶಪಡಿಸಿಕೊಂಡಾಗಿನಿಂದ ಅವರನ್ನು ಸಾರ್ವಜನಿಕರ ದೃಷ್ಟಿಯಿಂದ ದೂರವಿಡಲಾಗಿದೆ.ಪ್ರಕಟಣೆಯೊಂದಿಗೆ ಪ್ರಕಟವಾದ ಎರಡು ಛಾಯಾಚಿತ್ರಗಳಲ್ಲಿ ಸೂ ಕಿ ಅವರು ಮ್ಯಾನ್ಮಾರ್‌ಗೆ ಐಸಿಆರ್‌ಸಿಯ ಪ್ರತಿನಿಧಿ ಅರ್ನಾಡ್ ಡಿ ಬೇಕ್ ಅವರೊಂದಿಗೆ ಹಸ್ತಲಾಘವ ಮಾಡುತ್ತಿರುವುದನ್ನು ಮತ್ತು ಮರದ ಹಲಗೆಯ ಕೋಣೆಯಲ್ಲಿ ಅವರನ್ನು ಭೇಟಿಯಾಗುತ್ತಿರುವುದನ್ನು ತೋ-ರಿಸಲಾಗಿದೆ. ಛಾಯಾಚಿತ್ರಗಳನ್ನು ಬಿಡುಗಡೆ ಮಾಡಿದ ಅಧ್ಯಕ್ಷೀಯ ಪತ್ರಿಕಾ ಮತ್ತು ಮಾಹಿತಿ ಬ್ಯೂರೋ, ಸೋಮವಾರ ಬೆಳಿಗ್ಗೆ ಸಭೆ ನಡೆದಿದೆ ಎಂದು ಹೇಳಿದೆ ಆದರೆ ಸಭೆಯ ಸ್ಥಳವನ್ನು ಬಹಿರಂಗಪಡಿಸಲಿಲ್ಲ ಅಥವಾ ಚರ್ಚಿಸಲಾದ ವಿಷಯಗಳ ಬಗ್ಗೆ ವಿವರಗಳನ್ನು ನೀಡಲಿಲ್ಲ. ಇತರ ಎರಡು ಛಾಯಾಚಿತ್ರಗಳಲ್ಲಿ ಸೂ ಕಿ ಅವರು ಹ್ಯಾಪಿ ಬರ್ತ್‌ಡೇ ಆಂಟಿ ಸೂ, 19.6.2026 ಎಂಬ ಶಾಸನವನ್ನು ಹೊಂದಿರುವ ಗುಲಾಬಿ ಹುಟ್ಟುಹಬ್ಬದ ಕೇಕ್ ಅನ್ನು ಕತ್ತರಿಸುತ್ತಿರುವುದನ್ನು ತೋ-ರಿಸಲಾಗಿದೆ, ಇದು ಜೂನ್‌ನಲ್ಲಿ ಅವರ 81 ನೇ ಹುಟ್ಟುಹಬ್ಬದ ಆಚರಣೆಯ ಸಂದರ್ಭದಲ್ಲಿ ಅವುಗಳನ್ನು ತೆಗೆದಿರಬಹುದು ಎಂದು ಸೂಚಿಸುತ್ತದೆ. ಫೋಟೋಗಳಲ್ಲಿ, ಸೂ ಕಿ ನಿರಾಳವಾಗಿ ಕಾಣಿಸಿಕೊಂಡರು ಮತ್ತು ನಗುತ್ತಿರುವಂತೆ ಕಾಣಿಸಿಕೊಂಡರು. ಅವರ ದೈಹಿಕ ಸ್ಥಿತಿಯನ್ನು ಚಿತ್ರಗಳಿಂದ ಸ್ವತಂತ್ರವಾಗಿ ನಿರ್ಣಯಿಸಲು ಸಾಧ್ಯವಾಗದಿದ್ದರೂ, ಅವರು ಅನಾರೋಗ್ಯದ ಯಾವುದೇ ಸ್ಪಷ್ಟ ಲಕ್ಷಣಗಳನ್ನು ತೋರಿಸಲಿಲ್ಲ.

## ಚೇತರಿಕೆಗೊಂಡ ಮುಂಗಾರು, ಕೆಆರ್‌ಎಸ್, ಕಬಿನಿ ಜಲಾಶಯಗಳ ಒಳಹರಿವು ಹೆಚ್ಚಳ



ಮೈಸೂರು: ಆಗಸ್ಟ್ ತಿಂಗಳ ಆರಂಭದಲ್ಲಿ ಮುಂಗಾರು ಚೇತ-ರಿಕೆಗೊಂಡು ಕಾವೇರಿ ನದಿಯ ಜಲಾನಯನ ಭಾಗದಲ್ಲಿ ಉತ್ತಮ ಮಳೆಯಾಗಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಸಂಗ್ರಹವು ನೂರು ಅಡಿಗಿಂತ ಹೆಚ್ಚಾಗಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಠ ಸಾಮರ್ಥ್ಯ 124.80 ಅಡಿ ಆಗಿದ್ದು, ಇಂದು 100 ಅಡಿಗಿಂತ ಹೆಚ್ಚು ಸಂಗ್ರಹವಾಗಿದೆ. ಜೂನ್, ಜುಲೈನಲ್ಲಿ ಮುಂಗಾರು ದುರ್ಬಲಗೊಂಡು ಮಳೆ ಕೊರತೆಯಾಗಿ ಆತಂಕ ಉಂಟಾಗಿತ್ತು. ಆದರೆ, ಕಳೆದ ಮೂರು-ನಾಲ್ಕು ದಿನಗಳಿಂದ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆ ಮತ್ತಷ್ಟು ಚುರುಕುಗೊಂಡಿರುವ ಪರಿಣಾಮ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣದ ಹೆಚ್ಚಾಗಿ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಹಾರಂಗಿ ಜಲಾಶಯ ಭರ್ತಿಯಾಗಿದ್ದು, ನದಿಗೆ ಭಾರಿ ಪ್ರಮಾಣದಲ್ಲಿ ಬಿಡಲಾಗಿದೆ. ಇದರಿಂದ ಕೇವಲ ಮೂರು ದಿನಗಳ ಅಂತರದಲ್ಲಿ ಜಲಾಶಯದ ನೀರಿನ ಮಟ್ಟ 8 ಅಡಿ ಏರಿಕೆ ಕಂಡಿದೆ. 32,048 ಕ್ಯೂಸೆಕ್ ಒಳಹರಿವು ಇದ್ದು, ಇದೇ ರೀತಿ ಮಳೆ ಮುಂದುವರಿದರೆ ಕೆ.ಆರ್.ಎಸ್ ಜಲಾಶಯ ಶೀಘ್ರದಲ್ಲೇ ಭರ್ತಿಯಾಗುವ ನಿರೀಕ್ಷೆ ಇದೆ. ಆದರೆ, ಕೊಡಗು ಸೇರಿದಂತೆ ಜಲಾನಯನ ಭಾಗದಲ್ಲಿ ಮಳೆ ಪ್ರಮಾಣ ಇಳಿಮುಖವಾಗುತ್ತಿದೆ.

**ತಮಿಳುನಾಡಿಗೆ ನೀರು ಬಿಡುಗಡೆ ಸೂಚನೆ :**

ಇತ್ತೀಚೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ತಮಿಳುನಾಡಿಗೆ ಪ್ರತಿನಿತ್ಯ 3,500 ಕ್ಯೂಸೆಕ್ ನೀರನ್ನು 15 ದಿನಗಳವರೆಗೆ ಹರಿಸುವಂತೆ ಕರ್ನಾಟಕಕ್ಕೆ ಸೂಚಿಸಿತ್ತು. ಇದನ್ನು ರಾಜ್ಯ ಸರ್ಕಾರುವ ಅನುಷ್ಠಾನ ಮಾಡಲಾಗದು ಎಂದು ವಾದಿಸಿತ್ತು. ರೈತಪರ ಹಾಗೂ ಕನ್ನಡಪರ ಸಂಘಟನೆಗಳು ತಮಿಳುನಾಡಿಗೆ ನೀರು ಹರಿಸಬಾರದೆಂದು ಪ್ರತಿಭಟನೆ ಮಾಡಿದ್ದವು. ಅದರ ಬೆನ್ನಲ್ಲೇ ಉತ್ತಮ ಮಳೆಯಾಗಿದ್ದು, ಕಬಿನಿ ಜಲಾಶಯದಿಂದ ಸಾಕಷ್ಟು ನೀರು ಹೊರಬಿಡಲಾಗಿದೆ. ಜಲಾಶಯದ ನೀರಿನ ಮಟ್ಟ ಹೆಚ್ಚುತ್ತಿರುವುದ-ರಿಂದ ಜಿಲ್ಲೆಯ ರೈತರು ಮುಂಗಾರು ಬೆಳೆಗಳಿಗೆ ನೀರಿನ ಕೊರತೆಯಿಲ್ಲ ಎಂಬ ಸಮಾಧಾನ ವ್ಯಕ್ತಪಡಿಸಿದ್ದಾರೆ.

**ಕಬಿನಿ ಜಲಾಶಯದ ಒಳಹರಿವು ಹೆಚ್ಚಳ :**

ಮೈಸೂರು,ಆ.3- ಜಿಲ್ಲೆಯ ಎಚ್.ಡಿ.ಕೋಟೆ ಜಲಾನಯನ ಪ್ರದೇಶದಲ್ಲಿ ಮಳೆ ಮುಂದುವರೆದಿರುವುದರಿಂದ ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಜಲಾಶಯವು ಗರಿಷ್ಠ ಮಟ್ಟ ತಲುಪಲು ಇನ್ನೂ 1.41 ಅಡಿ ಮಾತ್ರ ಬಾಕಿ ಇದೆ.ಇಂದು ಜಲಾಶಯದ ನೀರಿನ ಮಟ್ಟ 2282.59 ಅಡಿ ದಾಖಲಾಗಿದೆ. ಜಲಾಶಯದ ಗರಿಷ್ಠ ಮಟ್ಟ 2284.00 ಅಡಿ. ನಿನ್ನೆ ಇದೇ ಸಮಯಕ್ಕೆ ಮಟ್ಟ 2282.25 ಅಡಿ ಇತ್ತು.ಜಲಾಶಯದ ಒಟ್ಟು ಸಂಗ್ರಹ ಸಾಮರ್ಥ್ಯ 19.52 ಟಿಎಂಸಿ ಆಗಿದ್ದು, ಪ್ರಸ್ತುತ 18.60 ಟಿಎಂಸಿ ನೀರು ಸಂಗ್ರಹವಾಗಿದೆ. ಜೀವಂತ ಸಂಗ್ರಹ 8.79 ಟಿಎಂಸಿ ಇದೆ. ಕಳೆದ ವರ್ಷ ಇದೇ ದಿನ ಸಂಗ್ರಹ 18.39 ಟಿಎಂಸಿ ಹಾಗೂ ಜೀವಂತ ಸಂಗ್ರಹ 8.58 ಟಿಎಂಸಿ ಇತ್ತು.ಒಳಹರಿವು 31,746 ಕ್ಯೂಸೆಕ್ ಇದೆ. ಕಳೆದ ವರ್ಷ 8,934 ಕ್ಯೂಸೆಕ್ ಇತ್ತು. ಹೊರಹರಿವಾಗಿ ಕಬಿನಿ ನದಿಗೆ 27,000 ಕ್ಯೂಸೆಕ್ ನೀರನ್ನು ಬಿಡಲಾಗುತ್ತಿದೆ. ಎಲ್.ಬಿ.ಸಿ, ಆರ್.ಬಿ.ಸಿ ಕಾಲುವೆಗಳು ಹಾಗೂ ಲಿಫ್?ಟಗಳಿಗೆ ನೀರಿನ ಬಿಡುಗಡೆ ಮಾಡಿಲ್ಲ. ಒಟ್ಟು ಹೊರಹ-ರಿವು 27,000 ಕ್ಯೂಸೆಕ್ ಆಗಿದೆ. ಕಳೆದ ವರ್ಷ 5,000 ಕ್ಯೂಸೆಕ್ ಇತ್ತು. ಜಲಾನಯನ ಪ್ರದೇಶದಲ್ಲಿ 20 ಎಂಎಂ ಮಳೆಯಾಗಿದೆ. ಆವಿಯಾಗುವಿಕೆಯಿಂದ 10.16 ಮಿಲಿಯನ್ ಘನ ಅಡಿ ನೀರು ನಷ್ಟವಾಗಿದೆ ಎಂದು ಜಲಾಶಯದ ಅಧಿಕಾರಿಗಳು ತಿಳಿಸಿದ್ದಾರೆ.

# ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ದರ ಹೆಚ್ಚಳ ಕುರಿತು ಪರಿಶೀಲನೆಗೆ ಸಮಿತಿ ರಚನೆ

ಬೆಂಗಳೂರು: ಬಸ್ ಟಿಕೆಟ್ ದರ ಹೆಚ್ಚಳದ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ಈ ಕುರಿತು ಅಧ್ಯಯನ ನಡೆಸಿ ವರದಿ ನೀಡಲು ನಿವೃತ್ತ ಐಎಎಸ್ ಅಧಿಕಾರಿ ಅತುಲ್ ಕುಮಾರ್ ತಿವಾರಿ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ನಾಲ್ಕೂ ಸಾರಿಗೆ ನಿಗಮಗಳ ಆರ್ಥಿಕ ಸ್ಥಿತಿಗತಿಗಳು, ನಷ್ಟದ ಪ್ರಮಾಣ ಹಾಗೂ ಪ್ರಯಾಣಿಕರ ಮೇಲಾಗುವ ಆರ್ಥಿಕ ಪರಿಣಾಮಗಳ ಕುರಿತು ಸಮಗ್ರವಾಗಿ ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಸಲ್ಲಿಸಲಿದೆ.

ಸಮಿತಿಯ ವರದಿ ಸಲ್ಲಿಕೆಯಾದ ಬಳಿಕ, ಸರ್ಕಾರ ಕೈಗೊಳ್ಳುವ ಅಂತಿಮ ನಿರ್ಧಾರದ ಆಧಾರದ ಮೇಲೆ ದರ ಏರಿಕೆಯ ಅಧಿಕೃತ ಆದೇಶ ಹೊರಬೀಳಲಿದೆ.ಸಮಿತಿಯ ವರದಿ ಹಾಗೂ ಸರ್ಕಾರದ ಹಸಿರು ನಿಶಾನೆಯ ಬಳಿಕ ದರ ಏರಿಕೆ ಜಾರಿಗೆ ಬರುವುದು ಖಚಿತ ಎನ್ನಲಾಗುತ್ತಿದ್ದು, ಇದು ಲಕ್ಷಾಂತರ ದೈನಂದಿನ ಪ್ರಯಾಣಿಕರಿಗೆ ಬರೆ ಎಳೆಯಲಿದೆ. ನಿಗಮಗಳ




ಪ್ರಸ್ತಾವನೆ ಸಾರಿಗೆ ನಿಗಮಗಳು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಬೇರೆ ಬೇರೆ ಪ್ರಮಾಣದ ದರ ಏರಿಕೆಗೆ ಬೇಡಿಕೆ ಇಟ್ಟಿವೆ. ಬಿಎಂಟಿಸಿ : ಬೆಂಗಳೂರು ಮಹಾನಗರ ಸಾರಿಗೆ ನಿಗಮವು ನಗರ ಪ್ರದೇಶದ ಪ್ರಯಾಣಿಕರ ದರವನ್ನು ಶೇ. 44ರಷ್ಟು ಹೆಚ್ಚಿಸುವಂತೆ ಪ್ರಸ್ತಾಪಿಸಿದೆ.ಕೆ-ಎಸ್‌ಆರ್‌ಟಿಸಿ : ರಾಜ್ಯದ ಇತರೆ ಭಾಗಗಳಿಗೆ ಸಂಚರಿಸುವ ಬಸ್‌ಗಳ ಟಿಕೆಟ್ ದರವನ್ನು ಶೇ. 33ರಷ್ಟು ಹೆಚ್ಚಿಸಲು ಮನವಿ ಮಾಡಲಾಗಿದೆ.

**ದರ ಏರಿಕೆಗೆ ಕಾರಣವೇನು :**

ಜಾಗತಿಕ ಮಟ್ಟದಲ್ಲಿ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ಏರಿಳಿತ ಉಂಟಾಗಿದ್ದು, ಪರಿಣಾಮವಾಗಿ ಡೀಸೆಲ್ ಬೆಲೆಯಲ್ಲಿ ಗಣನೀಯ ಹೆಚ್ಚಳವಾಗಿದೆ. ಲೀಟರ್‌ಗೆ ಸುಮಾರು 8 ರೂಪಾಯಿಯಷ್ಟು ಡೀಸೆಲ್ ದರ ಹೆಚ್ಚಾಗಿರುವುದರಿಂದ ನಿಗಮಗಳ ದೈನಂದಿನ ಕಾರ್ಯಾಚರಣೆ ವೆಚ್ಚವು ದುಬಾರಿಯಾಗಿದೆ. ಈಗಿರುವ ಹಳೆಯ ದರದಲ್ಲೇ ಸಾರಿಗೆ ಸೇವೆಗಳನ್ನು ಮುಂದುವರಿಸಿದರೆ ನಿಗಮಗಳ ಮೇಲೆ ಕೋಟ್ಯಂತರ ರೂಪಾಯಿಗಳ ಹೆಚ್ಚುವರಿ ಆರ್ಥಿಕ ಹೊರೆ ಬೀಳಲಿದೆ. ವಾರ್ಷಿಕವಾಗಿ ಅಂದಾಜು 480 ಕೋಟಿ ರೂಪಾಯಿಗೂ ಅಧಿಕ ನಷ್ಟ ಉಂಟಾಗುವ ಸಾಧ್ಯತೆಯಿದೆ ಎಂದು ನಿಗಮಗಳು ಕಳವಳ ವ್ಯಕ್ತಪಡಿಸಿವೆ.

ಮಧ್ಯಪ್ರಾಚ್ಯದಲ್ಲಿನ ಭೌಗೋಳಿಕ ರಾಜಕೀಯ ಬಿಕ್ಕಟ್ಟು ಹಾಗೂ ತೈಲ ಬೆಲೆ ಏರಿಕೆಯ ಬಿಸಿ ಇದೀಗ ಕರ್ನಾಟಕದ ಸಾರಿಗೆ ಪ್ರಯಾಣಿಕರ ಜೇಬಿಗೆ ಕತ್ತರಿ ಬೀಳಿಸುವ ಮುನ್ಸೂಚನೆ ನೀಡಿದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನಾಲ್ಕೂ ಸಾರಿಗೆ ನಿಗಮಗಳು ಬಸ್ ಟಿಕೆಟ್ ದರವನ್ನು ಗಣನೀಯವಾಗಿ ಹೆಚ್ಚಿಸುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಅಧಿಕೃತ ಪ್ರಸ್ತಾವನೆ ಸಲ್ಲಿಸಿವೆ.

# ಲೋಕಭವನದಲ್ಲಿಂದು ನೂತನ ಸಚಿವರ ಪ್ರಮಾಣವಚನ : ಬೆಂಗಳೂರಲ್ಲಿ ಮಾರ್ಗ ಬದಲಾವಣೆ

ಬೆಂಗಳೂರು: ಲೋಕಭವನದ ಗಾಜಿನ ಮನೆಯಲ್ಲಿ ಇಂದು ಸಂಜೆ ನೂತನ ಸಚಿವರುಗಳ ಪ್ರಮಾಣ ವಚನ ಸಮಾರಂಭ ನಿಗದಿಪಡಿಸಿರುವ ಹಿನ್ನಲೆಯಲ್ಲಿ ವಾಹನಗಳ ಸಂಚಾರವನ್ನು ನಿರ್ಭಂದಿಸಲಾಗಿದೆ. ಈ ಸಮಾರಂಭಕ್ಕೆ ಗಣ್ಯಾತಿಗಣ್ಯರು ಹಾಗೂ ಗಣ್ಯರು ಪಾಲ್ಗೊಳ್ಳಲು ಆಗಮಿಸುವ ಸಾಧ್ಯತೆ ಇದೆ.ಆಹ್ವಾನಿಕರಿಗೆ ಮಾತ್ರ ಪ್ರವೇಶವಿದ್ದು, ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ.

ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ನಿಮಿತ್ತ ಹೆಚ್ಚಿನ ಸಂಚಾರ ದಟ್ಟಣೆಯಾಗುವ ಸಾಧ್ಯತೆ ಇದ್ದು, ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಇಂದು ಸಂಜೆಯಿಂದ ರಾತ್ರಿ 10 ಗಂಟೆವರೆಗೆ ಸಂಚಾರ ಮಾರ್ಪಾಡು ಮಾಡಲಾಗಿದೆ. ಕಬ್ಬನ್ ರಸ್ತೆ್ತಯ ಬಿ.ಆರ್.ವಿ ಜಂಕ್ಷನ್ ನಿಂದ ಸಿ.ಟಿ.ಓ.ಜಂಕ್ಷನ್ ವರೆಗೆ ಹಾಗೂ ಸಿ.ಟಿ.ಓ. ವೃತ್ತದಿಂದ ಲೋಕಭವನದವರೆಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿರುವ ವಾಹನಗಳನ್ನು ಹೊರತುಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಭಂದಿಸಲಾಗಿದೆ. ಬಾಳೇಕುಂದ್ರಿ ಜಂಕ್ಷನ್‌ನಿಂದ ಅಂಬೇಡ್ಕರ್ ರಸ್ತೆ ಕಡೆಗೆ ಬರುವ ವಾಹನಗಳನ್ನು ಹೊರತು ಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಭಂದಿಸಲಾಗಿದೆ.

ಅಂಬೇಡ್ಕರ್ ರಸ್ತೆಯಲ್ಲಿ ಕೆಆರ್ ಸರ್ಕಲ್ ಕಡೆಯಿಂದ ಕಾಫಿಬೋರ್ಡ್ ಜಂಕ್ಷನ್ ವರೆಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿರುವ ವಾಹನಗಳನ್ನು ಹೊರತು ಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಭಂದಿಸಲಾಗಿದೆ. ಕ್ವೀನ್?ಸ ಜಂಕ್ಷನ್ ಕಡೆಯಿಂದ ಸಿಟಿಓ ಕಡೆಗೆ ಕಾರ್ಯಕ್ರಮದಲ್ಲಿ ಸಂಚರಿಸುವ ವಾಹನ ಹೊರತು ಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ.ಕ್ವೀನ್?ಸ ಜಂಕ್ಷನ್‌ನಲ್ಲಿ ಸೆಂಟ್ ಮಾರ್ಕ್ಸ್ ರಸ್ತೆಯಿಂದ ಸಿಟಿಓ ಜಂಕ್ಷನ್ ಕಡೆಗೆ ಬರುವ ವಾಹನಗಳ ಸಂಚಾರವನ್ನು ನಿರ್ಭಂದಿಸಲಾಗಿದೆ.

ವಾಹನಗಳ ನಿಲುಗಡೆ: ವಿಧಾನಸೌಧದ ಸಿಮೆಂಟ್ ಪಾರ್ಕಿಂಗ್ ಸ್ಥಳ ಹಾಗೂ ವಿಕಾಸಸೌಧದ ಸುತ್ತಮುತ್ತ, ರಾಜಭವನ ಹಿಂಭಾಗದ ಎಲ್ ಹೆಚ್ ವಾಹನ ನಿಲುಗಡೆ ಸ್ಥಳ, ನೆಹರೂ ತಾರಾಲಯದ ಆವರಣದಲ್ಲಿ ವಾಹನಗಳು ನಿಲುಗಡೆ ಮಾಡಲು




ಅವಕಾಶ ಕಲ್ಪಿಸಲಾಗಿದೆ. ಪಾಸ್ ಹೊಂದಿಲ್ಲದ ವಾಹನಗಳು: ಕೊಂಡಜ್ಜಿ ಭವನ ಆವರಣ, ಶಿವಾಜಿನಗರ ಬಸ್‌ನಿಲ್ದಾಣದ ಮೇಲ್ಭಾಗದ ಮಲ್ಟಿಲೆವೆಲ್ ಪಾರ್ಕಿಂಗ್ ಸ್ಥಳ, ಕಂಠೀರವ ಕ್ರೀಡಾಂಗಣ, ಯುಬಿ ಸಿಟಿ ಪಾರ್ಕಿಂಗ್ ಸ್ಥಳ, ಸರ್ಕಾರಿ ಕಲಾ ಕಾಲೇಜು ಆವರಣ, ಕಾರ್ಪೋರೇಷನ್ ಕಚೇರಿ ಸ್ಥಳ, ಪ್ಯಾಲೇಸ್ ಮೈದಾನದ ಗೇಟ್ ನಂ. 2,3 ಮತ್ತು 4 ರಲ್ಲಿ ಪಾಸ್ ಹೊಂದಿಲ್ಲದ ವಾಹನಗಳನ್ನು ನಿಲುಗಡೆ ಮಾಡಬಹುದಾಗಗಿದೆ. ಸಾರ್ವಜನಿಕರು ತಮ ಪ್ರಯಾಣವನ್ನು ಮುಂಚಿತವಾಗಿ ಯೋಜಿಸಿಕೊಂಡು ನಿರ್ಬಂಧಿತ ಮಾರ್ಗಗಳಲ್ಲಿ ತಮ ಪ್ರಯಾಣವನ್ನು ತಪ್ಪಿಸಿ ಸೂಚಿಸಲಾದ ಪರ್ಯಾಯ ಮಾರ್ಗಗಳನ್ನು ಬಳಸುವಂತೆ ಸಂಚಾರಿ ಪೊಲೀಸರು ಮನವಿ ಮಾಡಿದ್ದಾರೆ.

# ಸಂಪುಟ ವಿಸ್ತರಣೆ ಕುರಿತ ನಾಟಕೀಯ ಬೆಳವಣಿಗೆ : ಬ್ಲಾಕ್‌ಮೇಲ್‌ಗೆ ಮಣಿದ 'ಕೈ'ಕಮಾಂಡ್

ಬೆಂಗಳೂರು: ಸಚಿವ ಸಂಪುಟ ವಿಸ್ತರಣೆ ಕು-ರಿತ ನಿರ್ಧಾರಗಳಲ್ಲಿ ಕೆಲ ನಾಟಕೀಯ ಬೆಳವಣಿಗೆಗಳಾಗಿದ್ದು, ಸಚಿವ ಸ್ಥಾನ ನೀಡದೇ ಇದ್ದರೆ ಕುಟುಂಬ ಸಮೇತ ರಾಜೀನಾಮೆ ನೀಡುವುದಾಗಿ ಎಸ್.ಎಸ್.ಮಲ್ಲಿಕಾರ್ಜುನ ಅವರ ಬ್ಲಾಕ್‌ಮೇಲ್‌ಗೆ ಕಾಂಗ್ರೆಸ್ ಹೈಕಮಾಂಡ್ ಮಣಿದಿದೆ.

ಮೊದಲ ಪಟ್ಟಿಯಲ್ಲಿ ಹೆಸರು ಪ್ರಕಟಗೊಂಡಿದ್ದ ಉತ್ತರ ಕನ್ನಡ ಜಿಲ್ಲೆಯ ಮಂಕಾಳ ಸುಬ್ಬವೈದ್ಯ ಕೊನೆ ಕ್ಷಣದಲ್ಲಾದ ಬದಲಾವಣೆಯಿಂದ ಅವಕಾಶ ಕಳೆದುಕೊಂಡಿದ್ದಾರೆ. ಇದರಿಂದ ದುಗುಡಗೊಂಡು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಲು ಆಗಮಿಸಿದರು. ಆದರೆ ಕಾರ್ಯದೊತ್ತಡದ ನೆಪದಲ್ಲಿ ಮುಖ್ಯಮಂತ್ರಿಯವರು ಮಂಕಾಳ ವೈದ್ಯ ಅವರನ್ನು ಭೇಟಿಯಾಗಿಲ್ಲ ಎಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಂಕಾಳ ವೈದ್ಯ ತಮಗೆ ಇನ್ನೂ ಯಾವುದೇ





ಖಚಿತ ಮಾಹಿತಿ ಇಲ್ಲ. ಮುಖ್ಯಮಂತ್ರಿಯವರು ಭೇಟಿಗೆ ಸಿಕ್ಕಿಲ್ಲ, ಮತ್ತೊಮ್ಮೆ ಬರುತ್ತೇನೆ. ನಾನು ಮಾತನಾಡುವ ವ್ಯಕ್ತಿಯಲ್ಲ. ಕೆಲಸ ಮಾಡುವ ಜನ ಎಂದು ಹೇಳಿ ತೆರಳಿದ್ದಾರೆ.

**ರಾಜೀನಾಮೆ ಒತ್ತಡ:**

ಲಿಂಗಾಯತ ವೀರಶೈವ ಸಮುದಾಯದ ಪ್ರಭಾವಿ ಮುಖಂಡರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಪುತ್ರರಾಗಿರುವ ಎಸ್.ಎಸ್. ಮಲ್ಲಿಕಾರ್ಜುನ್, ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿದ್ದರು. ಆದರೆ ಮೊದಲ ಹಂತದ ಸಂಪುಟ ರಚನೆಯಲ್ಲಿ ಮಲ್ಲಿಕಾರ್ಜುನ ಅವರನ್ನು ಕೈಬಿಡಲಾಗಿತ್ತು. ವಿಸ್ತರಣೆಯಲ್ಲಿ ಅವಕಾಶ ತಪ್ಪಿದ್ದರೆ ಕುಟುಂಬ ಸಮೇತ ಕಾಂಗ್ರೆಸ್‌ಗೆ ರಾಜೀನಾಮೆ ನೀಡುವುದಾಗಿ ಮಲ್ಲಿಕಾರ್ಜುನ್ ಬೆದರಿಕೆ ಹಾಕಿದ್ದರು ಎನ್ನಲಾಗಿದೆ. ಮಲ್ಲಿಕಾರ್ಜುನ್ ದಾವಣಗೆರೆ ಉತ್ತರದಿಂದ ಶಾಸಕರಾಗಿದ್ದರೆ, ದಾವಣಗೆರೆ ದಕ್ಷಿಣದಿಂದ ಅವರ ಪುತ್ರ ಸಮರ್ಥ ಶಾಮನೂರು ಇತ್ತೀಚೆಗೆ ಉಪಚುನಾವಣೆಯಲ್ಲಿ ಗೆದ್ದು ಶಾಸಕರಾಗಿದ್ದಾರೆ. ಮಲ್ಲಿಕಾರ್ಜುನ ಅವರ ಪತ್ನಿ ಡಾ.ಪ್ರಭಾ ದಾವಣಗೆರೆಯಿಂದ ಸಂಸದರಾಗಿದ್ದಾರೆ. ಒಂದೇ ಕುಟುಂಬಕ್ಕೆ ಸೇರಿದವರಿಗೆ ಎಲ್ಲಾ ಸ್ಥಾನಗಳು ದೊರೆತ್ತಿದ್ದು, ಕುಟುಂಬ ರಾಜಕಾರಣ-ಕ್ಕೆ ಕಾಂಗ್ರೆಸ್ ಪಕ್ಷ ಮಿತಿಮೀರಿದ ಒತ್ತು ನೀಡುತ್ತಿದೆ ಎಂಬ ಆರೋಪಗಳು ಕೇಳಿ ಬಂದಿವೆ. ರಾಜಕೀಯ ಹಿನ್ನಲೆಯಿಲ್ಲದೆ ಮಂಕಾಳ ವೈದ್ಯ ಕೊನೆ ಕ್ಷಣದಲ್ಲಿ ಬಲಿಪಶುವಾಗಿದ್ದಾರೆ.

# ಲೋಕಸಭೆ ಮುಂದುವರೆದ ಗದ್ದಲದ ನಡುವೆಯೇ 2 ಮಸೂದೆ ಮಂಡನೆ

ನವದೆಹಲಿ: ನೀಟ್ ಪತ್ರಿಕೆ ಸೋರಿಕೆ ಮತ್ತು ಅಯೋಧ್ಯೆ ರಾಮ ಮಂದಿರದಲ್ಲಿ ಭಕ್ತರ ಕಾಣಿಕೆ ಕಳ್ಳತನ ಆರೋಪದ ವಿರುದ್ಧ ವಿರೋಧ ಪಕ್ಷಗಳು ನಿರಂತರವಾಗಿ ಪ್ರತಿಭಟನೆ ನಡೆಸಿದ್ದರಿಂದ ಇಂದಿನ ಲೋಕಸಭೆ ಕಲಾಪವನ್ನು ಮಧ್ಯಾಹ್ನ 2 ಗಂಟೆಗೆ ಮುಂದೂಡಲಾಯಿತು. ಸದನದ ಸುಗಮ ಕಲಾಪಕ್ಕಾಗಿ ಸ್ಪೀಕರ್ ಪದೆ ಪದೇ ಮನವಿ ಮಾಡಿದರೂ, ವಿಪಕ್ಷಗಳ ಸದಸ್ಯರು ಜೋರು ಗದ್ದಲ ಎಬ್ಬಿಸಿದರು.

**ಗದ್ದಲದ ನಡುವೆ 2 ಮಸೂದೆ ಮಂಡನೆ:**

ವಿಪಕ್ಷಗಳ ಗದ್ದಲ, ಜೋರು ಘೋಷಣೆಗಳು ನಡುವೆಯೂ ಕೇಂದ್ರ ಸರ್ಕಾರ ಎರಡು ಮಸೂದೆಗಳನ್ನು ಮಂಡಿಸಿತು. ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ ಬಿಲ್- 2026 ಮತ್ತು ಬ್ಯಾಂಕರ್ಸ್ ಬುಕ್ಸ್ ಎವಿಡೆನ್ಸ್ ಬಿಲ್- 2026 ಅನ್ನು ಸದನದಲ್ಲಿ ಮಂಡಿಸಲಾಯಿತು. ಈ ಎರಡೂ ಮಸೂದೆಗಳ ಮೇಲೆ ಚರ್ಚೆ ನಡೆಸಲು ಸರ್ಕಾರ ವಿಪಕ್ಷಗಳಿಗೆ ನೋಟಿಸ್ ನೀಡಿತ್ತು. ಆದರೆ, ವಿರೋಧ ಪಕ್ಷಗಳ ಯಾವುದೇ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಆಸಕ್ತಿ ತೋರಿಸದ ಕಾರಣ, ಮಸೂದೆಗಳನ್ನು ಧ್ವನಿ ಮತದ ಮೂಲಕ ಮಂಡಿಸಲಾಯಿತು.ಸ್ಪೀಕರ್ ಮನವಿ : ಮಸೂದೆ ಮಂಡನೆಯ ಬಳಿಕ ಚರ್ಚೆಗಾಗಿ ವಿಪಕ್ಷಗಳ ಸದಸ್ಯರ ಹೆಸರನ್ನು ಸ್ಪೀಕರ್ ಕೂಗಿದರು. ಆದ-'ರೆ, ಯಾರೂ ಕೂಡ ಮಾತನಾಡಲಿಲ್ಲ. ಎಲ್ಲರೂ ತಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ. ಮಸೂದೆಗಳ ಮೇಲೆ ಚರ್ಚೆ ನಡೆಸಿದ ಎಂದು ಪದೆ ಪದೇ ಮನವಿ ಮಾಡಿದರು. ಆದರೆ, ವಿಪಕ್ಷಗಳ ಸದಸ್ಯರು ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗುವುದನ್ನು ಮುಂದುವರಿಸಿದರು. ಇದು ಸಂಸತ್ತಿನ ನಿಯಮಗಳಿಗೆ ವಿರುದ್ಧವಾಗಿದೆ ಎಂದು ಸ್ಪೀಕರ್ ಸದನದ ಗಮನಕ್ಕೆ ತಂದರು.

ಇಷ್ಟಾದರೂ ವಿಪಕ್ಷಗಳು ಕಿವಿಗೊಡದೇ ಪ್ರತಿಭಟನೆ ಮುಂದುವರಿಸಿದಾಗ ಸ್ಪೀಕರ್ ಓಂ ಬಿರ್ಲಾ ಅವರು ಸದನವನ್ನು ಮಧ್ಯಾಹ್ನ 2 ಗಂಟೆಯವರೆಗೆ ಮುಂದೂಡಲಾಗಿದೆ ಎಂದು ಘೋಷಿಸಿದರು. ಇದಕ್ಕೂ ಮೊದಲು ಇಂದಿನ ಅಧಿವೇಶನ ಬೆಳಗ್ಗೆ 11 ಗಂಟೆಗೆ ಆರಂಭವಾದ ತಕ್ಷಣವೇ ಪ್ರತಿಪಕ್ಷಗಳ ಸದಸ್ಯರು



ಗಲಾಟೆ ಎಬ್ಬಿಸಿದರು. ಇದರಿಂದ ಸ್ಪೀಕರ್ ಓಂ ಬಿರ್ಲಾ ಅವರು ಸದನವನ್ನು ಮಧ್ಯಾಹ್ನ 12 ಗಂಟೆಯವರೆಗೆ ಮುಂದೂಡಿದ್ದರು.

ಬರೀ ಗದ್ದಲ, ಮುಂದೂಡಿಕೆ : ಜುಲೈ 20 ರಿಂದ ಆರಂಭವಾಗಿರುವ ಮಳೆಗಾಲದ ಸಂಸತ್ ಅಧಿವೇಶನದ ಕಳೆದ ಎರಡು ವಾರ ಬರೀ ಗದ್ದಲದಲ್ಲಿಯೇ ಮುಗಿದಿದೆ. ನೀಟ್ ಅಕ್ರಮ ಮತ್ತು ಅದಕ್ಕೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ಪರಿಚಯಿಸಿರುವ ಪರೀಕ್ಷಾ ಅಕ್ರಮ ತಡೆ ಮಸೂದೆಯ ಮೇಲೆ ಎರಡು ದಿನ ಚರ್ಚೆ ನಡೆದಿದ್ದು ಬಿಟ್ಟರೆ ನಿತ್ಯ ಗದ್ದಲ, ಪ್ರತಿಭಟನೆಯಿಂದ ಕಲಾಪ ನಡೆಯುತ್ತಿಲ್ಲ.


## ಸಂಸದ ಪಪ್ಪು ಯಾದವ್ ಕೊಲೆಗೆ ಯತ್ನ



ನವದೆಹಲಿ: ಪಕ್ಷೇತರ ಸಂಸದ ಪಪ್ಪು ಯಾದವ್ ಮೇಲೆ ಹಲ್ಲೆ ನಡೆಸಲು ಯತ್ನಿಸಿರುವ ಘಟನೆ ನಡಿದಿದೆ. ಬಿಹಾರದ ಪೂರ್ಣಿಯಾ ಕ್ಷೇತ್ರದ ಸ್ವತಂತ್ರ ಸಂಸದ ಪಪ್ಪು ಯಾದವ್ ಅವರ ನಿವಾಸದಲ್ಲಿ ಏರ್ಪಡಿಸಲಾಗಿದ್ದ ಮಾಧ್ಯಮಗೋಷ್ಠಿಯ ವೇಳೆ ಚಾಕು ಹಿಡಿದು ಬಂದಿದ್ದ ವ್ಯಕ್ತಿಯೊಬ್ಬ ಸಂಸದರ ಮೇಲೆ ಹಲ್ಲೆಗೆ ಯತ್ನಿಸಿದ್ದು, ಇದು ತನ್ನ ಕೊಲ್ಲುವ ಸಂಚು ಎಂದು ಪಪ್ಪು ಯಾದವ್ ಗಂಭೀರ ಆರೋಪ ಮಾಡಿದ್ದಾರೆ.

ದಾಳಿ ವೇಳೆ ಜಾಗರೂಕರಾದ ಸಂಸದರ ಬೆಂಬಲಿಗರು ಮತ್ತು ಆಪ್ತರು ಆತನನ್ನು ಹಿಡಿದು ಹಿಗ್ಗಾಮುಗ್ಗಾ ಥಳಿಸಿ, ಚಾಕುವನ್ನು ವಶಪಡಿಸಿಕೊಂಡಿದ್ದಾರೆ. ನಂತರ ಆತನನ್ನು ಪೊಲೀಸರಿಗೆ ಒಪ್ಪಿಸಲಾಗಿದೆ. ದಾಳಿಕೋರನನ್ನು ಉತ್ತರ ಪ್ರದೇಶದ ಬುಲಂದ್‌ಶಹರ್ ಮೂಲದ, ಪ್ರಸ್ತುತ ಗಾಜಿಯಾಬಾದ್‌ನಲ್ಲಿ ಕೆಲಸ ಮಾಡುತ್ತಿದ್ದ ಸುಮಿತ್ ಎಂದು ದೆಹಲಿ ಪೊಲೀಸರು ಗುರುತಿಸಿದ್ದಾರೆ. ಸಂಸದರ ನಿವಾಸದ ಹೊರಗೆ ಕಾರಿನಲ್ಲಿ ಕಾಯುತ್ತಿದ್ದ ಈತನ ಸಹಚರ ಹ್ಯಾಪಿ ಎಂಬಾತನನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.ದಾಳಿಯ ನಂತರ ಮಾತನಾಡಿದ ಸಂಸದ ಪಪ್ಪು ಯಾದವ್ ಅವರು, ದೆಹಲಿ ಪೊಲೀಸರ ವಿರುದ್ಧ ವಾಗ್ದಾಳಿ ನಡೆಸಿದರು. ನನ್ನ ಜೀವಕ್ಕೆ ಬೆದರಿಕೆಯಿದ್ದು, ದೀರ್ಘಕಾಲದಿಂದ ಸೂಕ್ತ ಭದ್ರತೆ ನೀಡುವಂತೆ ಮನವಿ ಮಾಡುತ್ತಿದ್ದರೂ ಪೊಲೀಸರು ನಿರ್ಲಕ್ಷಿಸಿದ್ದಾರೆ. ನಿನ್ನೆ ಬೆಂಬಲಿಗರು ಇಲ್ಲದಿದ್ದರೆ ನನ್ನನ್ನು ಕೊಂದು ಹಾಕುತ್ತಿದ್ದರು ಎಂದು ಅವರು ಆತಂಕ ವ್ಯಕ್ತಪಡಿಸಿದರು. ಶ್ರೀರಾಮ ಜನ್ಮಭೂಮಿಯ 200 ಕೆಜಿ ಬೆಳ್ಳಿ ಮತ್ತು ಚಿನ್ನ ಎಲ್ಲಿ ಹೋಯಿತು ಎಂದು ನಾನು ಪ್ರಶ್ನಿಸಿದ್ದಕ್ಕೆ ನನ್ನ ಮೇಲೆ ಈ ರೀತಿ ಕೊಲೆ ಯತ್ನ ನಡೆಸಲಾಗಿದೆ ಎಂದು ಅವರು ಆರೋಪಿಸಿದರು. ರಾಮಮಂದಿರ ದೇಣಿಗೆ ಕಳ್ಳತನ ಪ್ರಕರಣವನ್ನು ಉಲ್ಲೇಖಿಸಿ, ಪಪ್ಪು ಯಾದವ್ ಹಾಗೂ ಇತರ ವಿರೋಧ ಪಕ್ಷದ ಸಂಸದರು ಸಂಸತ್ತಿನ ಆವರಣದಲ್ಲಿ ಇತ್ತೀಚೆಗೆ ಸ್ಕಿಟ್ ಪ್ರದರ್ಶಿಸಿದ್ದರು. ಈ ನಾಟಕವು ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಬಿಜೆಪಿ ಕಟುವಾಗಿ ಟೀಕಿಸಿದೆ.ಈ ನಾಟಕದ ವಿರುದ್ಧ ವಾರಾಣಸಿಯಲ್ಲಿ ಪಪ್ಪು ಯಾದವ್, ರಾಹುಲ್ ಗಾಂಧಿ, ಅರವಿಂದ್ ಕೇಜ್ರಿವಾಲ್, ಅಖಿಲೇಶ್ ಯಾದವ್ ಮತ್ತು ಅವಧೇಶ್ ಪ್ರಸಾದ್ ವಿರುದ್ಧ ಪ್ರಕರಣ ದಾಖಲಾಗಿದೆ. ಪಪ್ಪು ಯಾದವ್ ಅವರು ಗ್ಯಾಂಗ್‌ಸ್ಟರ್ ಲಾರೆನ್?ಸ ಬಿಷ್ಣೋಯ್ ಪಡೆಯಿಂದಲೂ ಜೀವ ಬೆದರಿಕೆ ಕರೆಗಳನ್ನು ಸ್ವೀಕರಿಸಿದ್ದಾಗಿ ಈ ಹಿಂದೆ ತಿಳಿಸಿದ್ದರು ಹಾಗೂ ಗೃಹ ಸಚಿವಾಲಯಕ್ಕೆ ಕಟ್ಟುನಿಟ್ಟಿನ ಭದ್ರತೆ ಒದಗಿಸುವಂತೆ ಹಲವು ಬಾರಿ ಪತ್ರ ಬರೆದಿದ್ದರು. ಈ ದಾಳಿಯ ಹಿಂದೆ ರಾಜಕೀಯ ವೈಷಮ್ಯವಿದೆಯೇ ಅಥವಾ ವೈಯಕ್ತಿಕ ಕಾರಣಗಳಿವೆಯೇ ಎಂಬ ಕೋನದಲ್ಲಿ ದೆಹಲಿ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

## ಬೆಂಗಳೂರಿನಲ್ಲಿ ಆಯೋಜಿಸಿದ್ದ ವಿವಾದಿತ ಹಾಸ್ಯನಟ ಕುನಾಲ್ ಕಮ್ರಾ ಕಾರ್ಯಕ್ರಮ ರದ್ದು



ಬೆಂಗಳೂರು: ಹಿಂದೂ ಕಾರ್ಯಕರ್ತರ ತೀವ್ರ ವಿರೋಧದ ಹಿನ್ನೆಲೆಯಲ್ಲಿ ಸ್ಟ್ಯಾಂಡ್-ಅಪ್ ಹಾಸ್ಯನಟ ಕುನಾಲ್ ಕಮ್ರಾ ವೈಟ್‌ಫೀಲ್ಡ್ ನಲ್ಲಿ ತಮ್ಮ ಕಾರ್ಯಕ್ರಮಗಳನ್ನು ರದ್ದುಗೊಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ಅವರು ಭೇಟಿ ನೀಡಿ ತಮ್ಮ ಕಾರ್ಯಕ್ರಮಗಳನ್ನು ಮುಂದುವರಿಸುವುದಿಲ್ಲ ಎಂದು ಅಧಿಕಾರಿಗಳಿಗೆ ತಿಳಿಸಿದ್ದಾರೆ ಎಂದು ಅವರು ಹೇಳಿದರು. ಹಿಂದುತ್ವ ಕಾರ್ಯಕರ್ತರ ವಿರೋಧದಿಂದಾಗಿ ಅವರು (ಕಮ್ರಾ) ಪೊಲೀಸ್ ಠಾಣೆಗೆ ಬಂದು ವೈಟ್‌ಫೀಲ್ಡ್ ನಲ್ಲಿ ನಿಗದಿಯಾಗಿದ್ದ ಕಾರ್ಯಕ್ರಮವನ್ನು ರದ್ದುಗೊಳಿಸಲು ನಿರ್ಧರಿಸಿದ್ದಾರೆ ಎಂದು ತಿಳಿಸಿದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಾಮ್ರಾ ಅವರ ಕಾನೂನು ಮತ್ತು ಸುವ್ಯವಸ್ಥೆ ಮತ್ತು ಧಾರ್ಮಿಕ ಸಾಮರಸ್ಯಕ್ಕೆ ಬೆದರಿಕೆ ಇದೆ ಎಂದು ಉಲ್ಲೇಖಿಸಿ ಆಗಸ್ಟ್ 3 ರಂದು ಯುಆರ್‌ಯು ವೈಟ್‌ಫೀಲ್ಡ್ ನಲ್ಲಿ ನಿಗದಿಯಾಗಿದ್ದ ಕಮ್ರಾ ಅವರ ಸ್ಟ್ಯಾಂಡ್-ಅಪ್ ಪ್ರದರ್ಶನವನ್ನು ರದ್ದುಗೊಳಿಸುವಂತೆ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ಇತ್ತೀಚೆಗೆ ಬೆಂಗಳೂರು ಪೊಲೀಸರಿಗೆ ಅರ್ಜಿ ಸಲ್ಲಿಸಿದ ನಂತರ ಈ ಬೆಳವಣಿಗೆ ಸಂಭವಿಸಿದೆ. ಕಾಮ್ರಾ ಹಿಂದೂ ದೇವತೆಗಳನ್ನು ಅಗೌರವಿಸಿದ್ದಾರೆ ಎಂದು ಅವರು ವಾದಿಸಿದ್ದಾರೆ. ಈ ಕುರಿತಂತೆ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಕಮ್ರಾ ಸೋಮವಾರ, ಮಂಗಳವಾರ, ಬುಧವಾರ ಮತ್ತು ಗುರುವಾರದ ಕಾರ್ಯಕ್ರಮಗಳನ್ನು ಕೋರಮಂಗಲದ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ ಎಂದು ಹೇಳಿದ್ದಾರೆ. ವೈಟ್‌ಫೀಲ್ಡ್ ಪ್ರದರ್ಶನಕ್ಕಾಗಿ ಖರೀದಿಸಿದ ಟಿಕೆಟ್‌ಗಳ ಮರುಪಾವತಿಯನ್ನು ಬುಕ್‌ಮೈಶೋ ಪ್ಲಾಟ್‌ಫಾರ್ಮ್ ಪ್ರಕ್ರಿಯೆಗೊಳಿಸುತ್ತದೆ ಎಂದು ಅವರು ಮಾಹಿತಿ ನೀಡಿದರು ಮತ್ತು ಸೀಮಿತ ಆಸನ ಆಯ್ಕೆಗಳನ್ನು ಹೊಂದಿರುವ ಕೋರಮಂಗಲ ಸ್ಥಳಕ್ಕೆ ಪ್ರದರ್ಶನಗಳನ್ನು ಕಾಯ್ದಿರಿಸುವಂತೆ ವಿನಂತಿಸಿದರು.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕುಸ್ತಿಪಟುಗಳ ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಬ್ರಿಜ್ ಭೂಷಣ್ ಶರಣ್ ಸಿಂಗ್ ಖುಲಾಸೆ

ನವದೆಹಲಿ: ಆರು ಮಹಿಳಾ ಕುಸ್ತಿಪಟುಗಳು ದಾಖಲಿಸಿದ್ದ ಲೈಂಗಿಕ ಕಿರುಕುಳ ಪ್ರಕರಣದಲ್ಲಿ ದೆಹಲಿ ನ್ಯಾಯಾಲಯ ಸೋಮವಾರ ಮಾಜಿ ಕುಸ್ತಿ ಫೆಡರೇಶನ್ ಆಫ್ ಇಂಡಿಯಾ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಖುಲಾಸೆಗೊಳಿಸಿದೆ. ಈ ತೀರ್ಪು ಭಾರತೀಯ ಕ್ರೀಡೆಯಲ್ಲಿ ಅತ್ಯಂತ ಉನ್ನತ ಮಟ್ಟದ ಕಾನೂನು ಹೋರಾಟಗಳಲ್ಲಿ ಒಂದಾದ ರಾಜ-ಕೀಯ ನಾಯಕಿಗೆ ನಿರಾಳತೆಯನ್ನು ತಂದಿದೆ.

ದೆಹಲಿಯ ರೌಸ್ ಅವೆನ್ಯೂ ನ್ಯಾಯಾಲಯವು ಬಿಜೆಪಿಯ ಮಾಜಿ ಸಂಸದ ಹಾಗೂ ಭಾರತೀಯ ಕುಸ್ತಿ ಒಕ್ಕೂಟದ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಮತ್ತು ಸಹ ಆರೋಪಿ ವಿನೋದ್ ತೋಮರ್ ಅವರನ್ನು ದೋಷಮುಕ್ತಗೊಳಿಸಿ (ಖುಲಾಸೆ) ಆದೇಶಿಸಿದೆ. ದೆಹಲಿ ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಶ್ವಿನಿ ಪನ್ವಾರ್ ಅವರು ಈ ಮಹತ್ವದ ತೀರ್ಪನ್ನು ಪ್ರಕಟಿಸಿದ್ದಾರೆ.

**ಪ್ರಕರಣದ ಹಿನ್ನೆಲೆ :**

ಜಂತರ್ ಮಂತರ್‌ನಲ್ಲಿ ಕುಸ್ತಿಪಟುಗಳು ನಡೆಸಿದ ತೀವ್ರ ಪ್ರತಿಭಟನೆ ಮತ್ತು ದೆಹಲಿ ಪೊಲೀಸರ ತನಿಖೆ ಹಾಗೂ



1500 ಪುಟಗಳ ಚಾರ್ಜ್‌ಶೀಟ್ ಆಧರಿಸಿ ಈ ವಿಚಾರಣೆ ನಡೆದಿತ್ತು. ದೇಶದ ದಿಗ್ಗಜ ಕುಸ್ತಿಪಟುಗಳಾದ ವಿನೇಶ್ ಫೋಗಟ್, ಸಾಕ್ಷಿ ಮಲಿಕ್ ಮತ್ತು ಬಜರಂಗ್ ಪುನಿಯಾ ನೇತೃತ್ವದಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ದೇಶದ ಪ್ರಮುಖ ಕ್ರೀಡಾಪಟುಗಳು ರಸ್ತೆಗಿಳಿದು ಐತಿಹಾಸಿಕ ಪ್ರತಿಭಟನೆ ನಡೆಸಿದ್ದರು. ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಗಂಭೀರ ಆರೋಪಗಳನ್ನು ಮಾಡಲಾಗಿತ್ತು. ಈ ಪ್ರತಿಭಟನೆಯ ತೀವ್ರತೆಯ ಬಳಿಕ ಎಚ್ಚೆತ್ತ ದೆಹಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ತೀವ್ರಗೊಳಿಸಿದ್ದರು. ಜೂನ್ 15, 2023 ರಂದು ಒಟ್ಟು 1500 ಪುಟಗಳ ಚಾರ್ಜ್‌ಶೀಟ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 354, 354, 354 ಮತ್ತು 506 ರಡಿ ಆರೋಪಗಳನ್ನು ಹೊ-ರಿಸಲಾಗಿತ್ತು.

ಅಲ್ಲದೆ, ಮೇ 2024ರಲ್ಲಿ ನ್ಯಾಯಾಲಯವು ಆರೋಪಗಳನ್ನು ನಿಗದಿಪಡಿಸಿ ವಿಚಾರಣೆ ನಡೆಸಿತ್ತು. ನ್ಯಾಯಾಲಯದಲ್ಲಿ ನಡೆದ ಸುದೀರ್ಘ ವಿಚಾರಣೆ ಹಾಗೂ ವಾದ-ಪ್ರತಿವಾದಗಳ ವೇಳೆ ಉಭಯ ಪಕ್ಷಗಳ ವಕೀಲರು ತಮ ವಾದ ಮಂಡಿಸಿದ್ದರು. ದೂರುದಾರರ ಪರವಾಗಿ ಹಿರಿಯ ವಕೀಲೆ ರೆಬೆಕಾ ಜಾನ್ ಹಾಗೂ ಬ್ರಿಜ್ ಭೂಷಣ್ ಪರವಾಗಿ ವಕೀಲ ರಾಜೀವ್ ಮೋಹನ್ ವಾದ ಮಂಡಿಸಿದ್ದರು. ಪ್ರಾಸಿಕ್ಯೂಷನ್ ಮಂಡಿಸಿದ ಸಾಕ್ಷ್ಯಾಧಾರಗಳು ಮತ್ತು ಆರೋಪಗಳನ್ನು ಸಾಬೀತುಪಡಿಸುವಲ್ಲಿ ಎದುರಾದ ಕೊರತೆಗಳನ್ನು ಪರಿಗಣಿಸಿ, ನ್ಯಾಯಾಲಯವು ಬ್ರಿಜ್ ಭೂಷಣ್ ಶರಣ್ ಸಿಂಗ್ ಹಾಗೂ ಡಬ್ಲ್ಯೂಎಫ್‌ಐನ ಮಾಜಿ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅವರನ್ನು ಎಲ್ಲಾ ಆರೋಪಗಳಿಂದ ಮುಕ್ತಗೊಳಿಸಿದೆ.ಈ ತೀರ್ಪಿನೊಂದಿಗೆ ಕುಸ್ತಿಪಟುಗಳು ಹಾಗೂ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದ್ದ ಈ ಬಹುಚರ್ಚಿತ ಕಾನೂನು ಹೋರಾಟಕ್ಕೆ ಪ್ರಮುಖ ತಿರುವು ಸಿಕ್ಕಂತಾಗಿದೆ.

# ರಾಜ್ಯ ನೇಮಕಾತಿಯ ಪರೀಕ್ಷೆಗಳಲ್ಲಿ ಗೊಂದಲ : ಸಿಬಿಟಿ ಮಾದರಿ ಅನುಸರಣೆಗೆ ಒತ್ತಾಯ

ಬೆಂಗಳೂರು: ಕಠಿಣ ಪರಿಶ್ರಮದ ಬಳಿಕವೂ ಸರ್ಕಾರದ ಹುದ್ದೆಗಳ ನೇಮಕಾತಿಗಾಗಿ ನಡೆಯುವ ಸ್ಪರ್ಧಾತಕ ಪರೀಕ್ಷೆಯಲ್ಲಿ ಗೊಂದಲಗಳು ಮುಂದುವರೆಯುತ್ತಿರುವ ನಡುವೆಯೇ ಕೇಂದ್ರ ಸರ್ಕಾರದ ರೀತಿಯಲ್ಲೇ ಸಿಬಿಟಿ ಮಾದರಿಯನ್ನು ಅನುಸರಿಸಬೇಕು ಎಂಬ ಒತ್ತಡ ಅಭ್ಯರ್ಥಿಗಳಿಂದ ಕೇಳಿ ಬರುತ್ತಿದೆ.

ರಾಜ್ಯದಲ್ಲಿ ಒಟ್ಟು 3,991ಕ್ಕೂ ಹೆಚ್ಚು ಪೊಲೀಸ್ ಕಾನ್?ಸಟೆಬಲ್‌ಗಳ ನೇಮಕಾತಿಗಾಗಿ ಪರೀಕ್ಷೆ ನಡೆದಿತ್ತು. ಅದಕ್ಕಾಗಿ 3.77ಲಕ್ಷ ಮಂದಿ ಅರ್ಜಿ ಸಲ್ಲಿಸಿದ್ದರು. ಸುಮಾರು 3.47 ಲಕ್ಷ ಮಂದಿ ನಿನ್ನೆ ಪರೀಕ್ಷೆ ಬರೆದಿದ್ದಾರೆ. ರಾಜ್ಯ ಸರ್ಕಾರ ಪ್ರಶ್ನೆ ಪತ್ರಿಕೆ ಸೋರಿಕೆ, ಅಕ್ರಮ, ನಕಲಿ ಸೇರಿದಂತೆ ನಾನಾ ರೀತಿಯ ಗೊಂದಲಗಳಿಗೆ ಕಡಿವಾಣ ಹಾಕಲು ಸಾಕಷ್ಟು ಬಿಗಿ ಕ್ರಮಗಳನ್ನು ಕೈಗೊಂಡಿತ್ತು. ಬಹುತೇಕ ಅದು ಪರಿಣಾಮ ಬೀರಿರುವ ಸಾಧ್ಯತೆಯಿದ್ದು, ಈವರೆಗೂ ಎಲ್ಲಿಯೂ ಗಂಭೀರ ಆರೋಪಗಳು ಕೇಳಿ ಬಂದಿಲ್ಲ. ಆದರೆ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಒಎಂಆರ್ ಶೀಟ್‌ಗಳ ಕ್ರಮ ಸಂಖ್ಯೆ ಹೊಂದಾಣಿಕೆಯಾಗಿಲ್ಲ ಎಂಬ ಕಾರಣಕ್ಕೆ ಹಾಸನ, ಹಾವೇರಿ, ವಿಜಯಪುರ ಜಿಲ್ಲೆಗಳಲ್ಲಿ ಗದ್ದಲಗಳಾಗಿವೆ. ಉತ್ತರ ಪತ್ರಿಕೆಯಲ್ಲಿ ಪ್ರಶ್ನೆ ಪತ್ರಿಕೆಯ ಕೋಡ್ ವರ್ಷನ್ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಒಂದು ವೇಳೆ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳ ಕ್ರಮಸಂಖ್ಯೆ ಬೇರೆಯಾಗಿದ್ದರೂ ಯಾವುದೇ ತೊಂದರೆಯಾಗುವುದಿಲ್ಲ. ಎರಡು ಕ್ರಮ ಸಂಖ್ಯೆಗಳು ಒಂದೇ ಆಗಿರಬೇಕೆಂದು ಪ್ರಾಧಿಕಾರ ಎಲ್ಲಿಯೂ ಕಡ್ಡಾಯ ಮಾಡಿಲ್ಲ. ಅಭ್ಯರ್ಥಿಗಳು ಗೊಂದಲಕ್ಕೊಳಗಾಗುವ ಅಗತ್ಯ ಇಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸ್ಪಷ್ಟಪಡಿಸಿದೆ.

ಎಷ್ಟೇ ಪ್ರಯತ್ನ ಪಟ್ಟರೂ ಸಾರ್ವಜನಿಕ ಪರೀಕ್ಷೆಗಳಲ್ಲಿ ಒಂದಲ್ಲಾ ಒಂದು ತೊಂದರೆ, ತೊಡಕುಗಳು ಎದುರಾಗುತ್ತಲೇ ಇವೆ. ನಿನ್ನೆಯ ಪರೀಕ್ಷೆಯಲ್ಲಿ ವಿಜಯಪುರದ ತಿಕೋಟದಲ್ಲಿ ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಕ್ರಮಸಂಖ್ಯೆಗಳು ಬೇರೆಯಾಗಿವೆ ಎಂದು ಆರೋಪಿಸಿ, ಪ್ರಶ್ನೆ ಪತ್ರಿಕೆ ಜೊತೆಗೆ ಒಎಂಆರ್ ಶೀಟ್‌ಗಳನ್ನು ತೆಗೆದುಕೊಂಡು ಅವಧಿಗೂ ಮುನ್ನವೇ ಪರೀಕ್ಷಾ ಕೇಂದ್ರದಿಂದ ಕಾಪೌಂಡ್ ಹಾರಿ ಹೊರಹೋಗಿದ್ದಾರೆ. ಬಳಿಕ ವಾಪಾಸ್ ಬಂದು ತಮಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕೆಂದು ಗದ್ದಲ ಮಾಡಿದ್ದಾರೆ. ಈ ಸಂದರ್ಭದಲ್ಲಿ ಬಹಳಷ್ಟು ವಿದ್ಯಾರ್ಥಿಗಳು ತಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದು, ರಾಜ್ಯ ಸರ್ಕಾರದ ನೇಮಕಾತಿಗಾಗಿ ಕೆಪಿಎಸ್‌ಸಿ, ಕೆಇಎ ಸೇ-ರಿದಂತೆ ಇತರ ಸಂಸ್ಥೆಗಳು ಅನುಸರಿಸುತ್ತಿರುವ ವಿಧಾನಗಳು ಸಮರ್ಪಕವಾಗಿಲ್ಲ. ಕೇಂದ್ರ ಸರ್ಕಾರ ಪಾಲಿಸುತ್ತಿರುವ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದ್ದಾರೆ.

ಕೇಂದ್ರ ಸರ್ಕಾರ 2013ರಿಂದಲೂ ನಿರಂತರವಾಗಿ ಸಿಬಿಟಿ ಮಾದರಿಯನ್ನು ನೇಮಕಾತಿ ಪರೀಕ್ಷೆಗಳಿಗೆ ಅನುಸರಿಸುತ್ತಿದೆ. ಸ್ಟಾಫ್ ಸೆಲೆಕ್ಷನ್ ಕಮಿಷನ್ ವಿದ್ಯಾರ್ಹತೆ ಆಧರಿತವಾಗಿ ನಡೆಸುವ ಪ್ರತಿಯೊಂದು ನೇಮಕಾತಿಗೂ ಸರಿಸುಮಾರು 30 ರಿಂದ 40 ಲಕ್ಷ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಯಾವುದೇ ಗೊಂದಲಗಳಾಗದಂತೆ ಸಿಬಿಟಿ ಆಧಾರಿತವಾಗಿ ಖಾಸಗಿ ಸಂಸ್ಥೆ ಮೂಲಕ ಪರೀಕ್ಷೆ ನಡೆಸಲಾಗುತ್ತಿದೆ. ಕಂಪ್ಯೂಟರ್ ಆಧಾರಿತ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳು ಮುದ್ರಣವಾಗುವುದಿಲ್ಲ, ಬದಲಾಗಿ ಆನ್‌ಲೈನ್‌ನಲ್ಲಿ ನೇರವಾಗಿ ಅಭ್ಯರ್ಥಿಗಳಿಗೆ ತಲುಪುತ್ತವೆ. ದಿನವೊಂದಕ್ಕೆ ಎರಡು, ಮೂರು ಪಾಳಿಯಂತೆ ವಾರಗಟ್ಟಲೆ ಪರೀಕ್ಷೆ ನಡೆಯುತ್ತವೆ. ಸರಿಸುಮಾರು 40 ರಿಂದ 50 ಲಕ್ಷ ಅಭ್ಯರ್ಥಿಗಳು ಯಾವುದೇ ಗೊಂದಲವಾಗದಂತೆ ಪರೀಕ್ಷೆ ಬರೆಯುತ್ತಾರೆ. ರಾಜ್ಯ ಸರ್ಕಾರ ಕೂಡ ಅದೇ ಮಾದರಿ



ಅನುಸರಿಸಬೇಕೆಂಬ ಒತ್ತಾಯವನ್ನು ಅಭ್ಯರ್ಥಿಗಳು ಮಾಡುತ್ತಿದ್ದಾರೆ.

ರಾಜ್ಯದಲ್ಲಿ ನೇಮಕಾತಿ ಪರೀಕ್ಷೆಗಳಿಗೆ ಉತ್ತಮ ಗುಣಮಟ್ಟದ ಮಾನದಂಡಗಳನ್ನು ಅನುಸರಿಸುತ್ತಿಲ್ಲ ಎಂಬ ಆರೋಪಗಳಿವೆ. ಕೇಂದ್ರ ಸರ್ಕಾರದ ನೇಮಕಾತಿ ಪರೀಕ್ಷೆಯಲ್ಲಿ ಸಾಮಾನ್ಯ ಜ್ಞಾನ, ವಿಷಯಾಧಾರಿತ ಪಠ್ಯಗಳನ್ನು ಆಧರಿಸಿ ನಿರ್ದಿಷ್ಟ ಪ್ರಮಾಣದ ಪ್ರಶ್ನೆಗಳಿರುವುದು ಖಚಿತವಾಗಿರುತ್ತದೆ. ಹೀಗಾಗಿ ಅಭ್ಯರ್ಥಿಗಳು ಶ್ರಮಪಟ್ಟು ಓದಿ ಪರೀಕ್ಷೆ ಬರೆಯುತ್ತಾರೆ ಮತ್ತು ಉದ್ಯೋಗ ಗಿಟ್ಟಿಸುವ ವಿಷಯದಲ್ಲಿ ಖಚಿತ ವಿಶ್ವಾಸ ಹೊಂದಿರುತ್ತಾರೆ.

ರಾಜ್ಯ ಸರ್ಕಾರದ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಲೋಕ ಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಪರೀಕ್ಷೆಗಳಲ್ಲಿ ನಿರ್ದಿಷ್ಟ ಮಾನದಂಡಗಳೇ ಇಲ್ಲ ಎಂಬ ಟೀಕೆಗಳಿವೆ. ಒಮೆ ಸಾಮಾನ್ಯ ಜ್ಞಾನಕ್ಕೆ ಸಂಬಂಧಪಟ್ಟಂತೆ 25 ಪ್ರಶ್ನೆಗಳನ್ನು ಕೇಳಿದರೆ ಮತ್ತೊಂಮೆ ಸಾಮಾನ್ಯ ಜ್ಞಾನದ ಪ್ರಶ್ನೆಗಳನ್ನು 5 ರಿಂದ 10ಕ್ಕೆ ಕಡಿತಗೊಳಿಸಲಾಗುತ್ತದೆ.
ವಿಷಯಾಧಾರಿತ ಪಠ್ಯದ ಕುರಿತು ಪ್ರಶ್ನೆಗಳ ವಿಚಾರದಲ್ಲೂ ಪ್ರತಿ ಬಾರಿ ಈ ರೀತಿ ಗೊಂದಲಗಳಾಗುವುದರಿಂದ ಯಾವುದನ್ನು ಓದಬೇಕು, ಯಾವುದನ್ನು ಕಲಿಯಬೇಕು ಎಂಬ ಬಗ್ಗೆ ಅಭ್ಯರ್ಥಿಗಳಿಗೆ ಸ್ಪಷ್ಟತೆ ಇರುವುದಿಲ್ಲ ಎನ್ನಲಾಗಿದೆ. ವಿಷಯಾಧಾ-ರಿತ ಪ್ರಶ್ನೆಗಳಿಗೆ ಪೂರ್ವ ತಯಾರಿ ಮಾಡಿಕೊಂಡಿದ್ದ ಅಭ್ಯರ್ಥಿಗಳಿಗೆ ಏಕಾಏಕಿ ಸಾಮಾನ್ಯ ಜ್ಞಾನದ ಪ್ರಶ್ನೆಗಳು ಎದುರಾಗುತ್ತದೆ. ಸಾಮಾನ್ಯ ಜ್ಞಾನದ ಪ್ರಶ್ನೆಗಳನ್ನು ಓದಿಕೊಂಡು ತಯಾರಾದ ಅಭ್ಯರ್ಥಿಗಳು ಮಾತ್ರ ಆ ಪರೀಕ್ಷೆಯಲ್ಲಿ ಯಶಸ್ವಿಯಾಗುತ್ತಾರೆ. ಖಚಿತ ಮಾನದಂಡ ಇಲ್ಲದೇ ಇರುವುದರಿಂದ ಸರ್ಕಾರಿ ಉದ್ಯೋಗದ ಆಯ್ಕೆ ಅದೃಷ್ಟದ ಬೆನ್ನೇರುವಂತಾಗಿದೆ. ಈ ರೀತಿಯ ಧೋರಣೆಗಳಿಂದ ರಾಜ್ಯ ಸರ್ಕಾರದ ಪರೀಕ್ಷೆಗಳು ಗೊಂದಲಗಳ ಗೂಡಾಗುತ್ತವೆ ಮತ್ತು ಅಭ್ಯರ್ಥಿಗಳ ವಿರೋಧಿಯಾಗಿದೆ ಎಂದು ಹೇಳಲಾಗುತ್ತಿದೆ. ಕೇಂದ್ರ ಸರ್ಕಾರದ ಮಾದರಿಯಲ್ಲಿ ನಿರ್ದಿಷ್ಟ ಮಾನದಂಡಗಳ ಅನುಸರಣೆ, ಸಿಬಿಟಿ ಪದ್ಧತಿ ಅಳವಡಿಕೆ ಮಾಡುವುದರಿಂದ ಸರ್ಕಾರಿ ನೇಮಕಾತಿಗಳಲ್ಲಿ ಪಾರದರ್ಶಕತೆ ತರಲು ಸಾಧ್ಯವಾಗುತ್ತದೆ. ಇಲ್ಲವಾದರೆ ಎಷ್ಟೇ ಎಚ್ಚರಿಕೆ ಕ್ರಮಗಳನ್ನು ಕೈಗೊಂಡರೂ ಗೊಂದಲಗಳು ಮುಂದುವರೆಯುತ್ತಲೇ ಇರುತ್ತವೆ, ಅಭ್ಯರ್ಥಿಗಳು ಸರ್ಕಾರಕ್ಕೆ ಇಡೀ ಶಾಪ ಹಾಕುವುದು ತಪ್ಪುವುದಿಲ್ಲ ಎಂಬ ವ್ಯಾಖ್ಯಾನಗಳಿವೆ.

# ಡಿಕೆಶಿ ಸಂಪುಟ ಸಾಮಾಜಿಕ ನ್ಯಾಯ : 7 ಜಿಲ್ಲೆಗಳಿಗೆ ಇಲ್ಲ ಮಂತ್ರಿ ಸ್ಥಾನ, 9 ಮಂದಿ ಹೊಸಬರಿಗೆ ಚಾನ್ಸ್

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂಪುಟಕ್ಕೆ ಪೂರ್ಣಪ್ರಮಾಣದ ಸಚಿವರ ನಿಯೋಜನೆಯಾಗಿದ್ದು, ಸಾಮಾಜಿಕ ನ್ಯಾಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.7 ಜಿಲ್ಲೆಗಳು ಅವಕಾಶ ವಂಚಿತವಾಗಿವೆ. 9 ಮಂದಿ ಮೊದಲ ಬಾರಿಗೆ ಸಚಿವರಾಗುತ್ತಿದ್ದು, ಉಳಿದ 11 ಮಂದಿ ಮಾಜಿ ಸಚಿವರುಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಸಚಿವ ಸಂಪುಟದಲ್ಲಿ ಒಕ್ಕಲಿಗ, ಲಿಂಗಾಯತ ಸಮುದಾಯಕ್ಕೆ ತಲಾ ಆರು ಸ್ಥಾನಗಳು, ಪರಿಶಿಷ್ಟ ಜಾತಿಯ ಎಲ್ಲಾ ಪಂಗಡಗಳನ್ನೊಳಗೊಂಡು 7 ಸ್ಥಾನಗಳು, ಪರಿಶಿಷ್ಟ ಪಂಗಡ ಮತ್ತು ಮುಸ್ಲಿಂ ಸಮುದಾಯಕ್ಕೆ ತಲಾ ಮೂರು ಸ್ಥಾನಗಳು, ಹಿಂದುಳಿದ ವರ್ಗಗಳ ಪೈಕಿ ಕುರುಬ ಸಮುದಾಯಕ್ಕೆ ಮೂರು, ಈಡಿಗ, ಉಪ್ಪಾರ, ಬೆಸ್ತ, ಕ್ಷತ್ರಿಯಾ ಮತ್ತು ಮರಾಠ ಸಮುದಾಯಕ್ಕೆ ತಲಾ ಒಂದು ಸ್ಥಾನಗಳನ್ನು ನೀಡಲಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಕ್ಕಲಿಗ ಸಮುದಾಯಕ್ಕೆ ಸೇರಿದ್ದು, ಕೃಷ್ಣಭೈರೇಗೌಡ, ಚೆ?ಲುವರಾಯಸ್ವಾಮಿ, ಕೆ.ಎಂ.ಶಿವಲಿಂಗೇಗೌಡ, ಎಚ್.ಸಿ.ಬಾಲಕೃಷ್ಣ ಮತ್ತು ರಾಮಲಿಂಗಾರೆಡ್ಡಿ ಸಂಪುಟದಲ್ಲಿದ್ದಾರೆ.

ಲಿಂಗಾಯತ ಸಮುದಾಯದಿಂದ ಎಂ.ಬಿ.ಪಾಟೀಲ್, ಈಶ್ವರ್ ಖಂಡ್ರೆ, ಶರಣಪ್ರಕಾಶ್ ಪಾಟೀಲ್, ಲಕ್ಷ್ಮಣ ಸವದಿ, ವಿಜಯಾನಂದ ಕಾಶಪ್ಪನವರ್, ಬಸವರಾಜರಾಯ ರೆಡ್ಡಿ ಸಚಿವರಾಗಲಿದ್ದಾರೆ. ಕೊನೆಯ ಕ್ಷಣದಲ್ಲಿ ಎಸ್.ಎಸ್.ಮಲ್ಲಿಕಾರ್ರುಜನ್ ಅವರನ್ನು ಸಂಪುಟಕ್ಕೆ ಸೇ-ರಿಸಿಕೊಳ್ಳುವ ಸಲುವಾಗಿ ಬೆಸ್ತ ಸಮುದಾಯದ ಮಂಕಾಳ ವೈದ್ಯ ಅವರನ್ನು ಕೈಬಿಡಲಾಗಿದೆ.





ಪರಿಶಿಷ್ಟ ಜಾತಿಯ ಪೈಕಿ ಬಲಗೈ ಸಮುದಾಯದ ಡಾ.ಜಿ.ಪರಮೇಶ್ವರ್ ಉಪ ಮುಖ್ಯಮಂತ್ರಿಯಾಗಿದ್ದು, ಪ್ರಿಯಾಂಕ್ ಖರ್ಗೆ, ಪಿ.ಎಂ.ನರೇಂದ್ರಸ್ವಾಮಿ ಸಂಪುಟ ಸೇರಿದ್ದಾರೆ.ಎಡಗೈ ಸಮುದಾಯದ ಕೆ.ಎಚ್. ಮುನಿಯಪ್ಪ ಮೊದಲಿನಿಂದಲೂ ಸಚಿವರಾಗಿದ್ದು, ಅದೇ ಸಮುದಾಯದ ಮತ್ತೊಂದು ಉಪ ಪಂಗಡಕ್ಕೆ ಸೇರಿದ ಕೆ.ಎಸ್.ಬಸಂತಪ್ಪ ಅವಕಾಶ ಪಡೆದಿದ್ದಾರೆ. ಆರ್.ಬಿ.ತಿಮಾಪೂರ್, ಸುಧಾಮದಾಸ್ ಅವಕಾಶ ವಂಚಿತರಾಗಿದ್ದಾರೆ.ಬೋವಿ ಸಮುದಾಯದಿಂದ ಶಿವರಾಜ್ ತಂಗಡಗಿ, ಲಂಬಾಣಿ ಸಮುದಾಯದಿಂದ ರುದ್ರಪ್ಪ ಲಮಾಣಿ ಅವಕಾಶ ಪಡೆದಿದ್ದಾರೆ. ಪರಿಶಿಷ್ಟ ಪಂಗಡದಿಂದ ಸತೀಶ್ ಜಾರಕಿಹೊಳಿ ಮೊದಲ ಸಚಿವರಾಗಿದ್ದರೆ ಬಿ.ನಾಗೇಂದ್ರ ವಾಲೀಕಿ ಹಗರಣದಲ್ಲಿ ರಾಜೀನಾಮೆ ನೀಡಿದ್ದರು. ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ.ಹೊಸಮುಖ ಟಿ.ರಘುಮೂರ್ತಿ ಅವರಿಗೆ ಮಣೆ ಹಾಕಲಾಗಿದೆ. ಮುಸ್ಲಿಂ ಸಮುದಾಯದಿಂದ ಯು.ಟಿ.ಖಾದರ್ ಸಚಿವರಾಗಿದ್ದು ಕೊನೇ ಕ್ಷಣದಲ್ಲಿ ಜಮೀರ್ ಅಹಮದ್ ಖಾನ್, ರಿಜ್ವಾನ್ ಅರ್ಷದ್ ಅವರೂ ಅವಕಾಶ ಪಡೆದಿದ್ದಾರೆ. ಹಿಂದುಳಿದ ವರ್ಗಗಳಲ್ಲಿ ಪ್ರಮುಖ ಜಾತಿಯಾದ ಕುರುಬ ಸಮುದಾಯದಿಂದ ಬೈರತಿ ಸುರೇಶ್, ಯತೀಂದ್ರ ಸಿದ್ದರಾಮಯ್ಯ, ಗಾಯತ್ರಿ ಶಾಂತೇಗೌಡ, ಈಡಿಗ ಸಮುದಾಯದಿಂದ ಮಧು ಬಂಗಾರಪ್ಪ, ಉಪ್ಪಾರ ಸಮುದಾಯದಿಂದ ಪುಟ್ಟರಂಗಶೆಟ್ಟಿ, ಕ್ಷತ್ರಿಯಾ ಸಮುದಾಯದಿಂದ ಅಜಯ್ ಸಿಂಗ್, ಮರಾಠ ಸಮುದಾಯದಿಂದ ಸಂತೋಷ್‌ಲಾಡ್ ಸಚಿವರಾಗಿದ್ದಾರೆ.ಬೆಸ್ತ ಸಮುದಾಯದ ಮಂಕಾಳ ವೈದ್ಯ ಅವರ ಹೆಸರು ಮೊದಲ ಪಟ್ಟಿಯಲ್ಲಿತ್ತು. ಆದರೆ ಕೊನೇ ಕ್ಷಣದಲ್ಲಿ ಪ್ರಭಾವಿ ನಾಯಕರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ಪುತ್ರರೂ ಆಗಿರುವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಸ್ಥಾನ ಹೊಂದಿಸಲು ಮಂಕಾಳ ವೈದ್ಯ ಅವರನ್ನು ಕೈಬಿಡಲಾಗಿದೆ. ಈ ಮೂಲಕ ಲಿಂಗಾಯತ ಸಮುದಾಯಕ್ಕೆ ಆರರ ಬದಲು ಏಳು ಸ್ಥಾನಗಳು ದೊರೆತಂತಾಗಿದೆ.ಕ್ರಿಶ್ಚಿಯನ್ ಸಮುದಾಯದಿಂದ ಹಿರಿಯರಾದ ಕೆ.ಜೆ.ಜಾರ್ಜ್ ಸಂಪುಟದಲ್ಲಿದ್ದಾರೆ.

**ಭೌಗೋಳಿಕ ಆದ್ಯತೆ :**

ಬೆಂಗಳೂರಿನಿಂದ ಆರು ಮಂದಿ ಸಚಿವರಾಗಿರುವುದರಿಂದ ಸಿಂಹಪಾಲು ದೊರೆತ್ತಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಜಿಲ್ಲೆ ಕಲಬುರಗಿಗೆ ಮೂರು ಸ್ಥಾನಗಳು ದೊರೆತ್ತಿವೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ತವರು ಜಿಲ್ಲೆ ಬೆಂಗಳೂರು ದಕ್ಷಿಣಕ್ಕೆ 2 ಸ್ಥಾನಗಳು ಸಿಕ್ಕಿವೆ. ಮೊದಲ ಪಟ್ಟಿಯಲ್ಲಿ ದಾವಣಗೆರೆಗೆ ಒಂದು ಮಂತ್ರಿ ಸ್ಥಾನ ಮಾತ್ರ ಸಿಕ್ಕಿತ್ತು. ಆದರೆ ಕೊನೆಯ ಕ್ಷಣದ ಬದಲಾವಣೆಯಲ್ಲಿ ಎಸ್.ಎಸ್.ಮಲ್ಲಿಕಾರ್ಜುನ್ ಸೇರ್ಪಡೆಯಿಂದ ಎರಡು ಸ್ಥಾನಗಳಾಗಿವೆ. ಮಂಡ್ಯ, ಬೆಳಗಾವಿ, ಕೊಪ್ಪಳ ಜಿಲ್ಲೆಗಳಿಗೆ ತಲಾ 2, ಬಾಗಲಕೋಟೆ, ಹಾಸನ, ವಿಜಯಪುರ, ಬೀದರ್, ತುಮಕೂರು, ಹಾವೇರಿ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಚಿತ್ರದುರ್ಗ, ದಕಿಣ ಕನ್ನಡ, ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗ, ಚಾಮರಾಜನಗರ, ಉತ್ತರ ಕನ್ನಡ, ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಿಗೆ ತಲಾ ಒಂದು ಸ್ಥಾನ ದೊರೆತ್ತಿದೆ.ಕೋಲಾರ, ಚಿಕ್ಕಬಳ್ಳಾಪುರ, ಕೊಡಗು, ಗದಗ, ವಿಜಯನಗರ, ರಾಯಚೂರು, ಯಾದಗಿರಿ ಜಿಲ್ಲೆಗಳು ಸಂಪೂರ್ಣ ಅವಕಾಶ ವಂಚಿತವಾಗಿವೆ. ಉಡುಪಿ ಜಿಲ್ಲೆಯಲ್ಲಿ ಕಾಂಗ್ರೆಸ್ ಶಾಸಕರು ಇಲ್ಲದೇ ಇರುವುದರಿಂದ ಅವಕಾಶ ಸಿಕ್ಕಿಲ್ಲ.

## ಜಿ ಎಸ್ ಪಾಟೀಲರ ಸಾಧನೆಗಳ ವಿವರ ॥ 43 ವರ್ಷಗಳ ರಾಜಕೀಯ ಪಕ್ಷಿನೋಟ

# ಸಾವಿರ ಕೆರೆಗಳ ಸರದಾರನೀಗ ಸಭಾಧ್ಯಕ್ಷ

ಗದಗ: ಜಿ ಎಸ್ ಪಾಟೀಲರು 1983ರಲ್ಲಿ ರೋಣ ಪಟ್ಟಣ ಪಂಚಾಯತ ಮತ್ತು ಎಪಿಎಮ್‌ಸಿ ಸವಡಿ ಮತಕ್ಷೇತ್ರದಿಂದ ಏಕಕಾಲಕ್ಕೆ ಚುನಾಯಿತರಾಗುವ ಮೂಲಕ ರಾಜಕೀಯ ಪ್ರವೇಶ ಮಾಡಿದರು. 1989 ರಲ್ಲಿ ರೋಣ ಮತಕ್ಷೇತ್ರದಿಂದ ಜಯಿಸಿ ವಿಧಾನಸಭೆಗೆ ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ತಾಯಿ ಶ್ರೀಮತಿ ಬಸಮ್ಮನವರ ಪ್ರೇರಣೆಯಂತೆ ತಂದೆಯ ಆಸೆಯಂತೆ ರೋಣದಲ್ಲಿ ಜನಬೆಂಬಲದಿಂದ 30 ಕೊಠಡಿಗಳ ಸರಕಾರಿ ಪ್ರಾಥಮಿಕ ಶಾಲೆ ನಿರ್ಮಿಸಿದರು. ಇಂದು ಎಸ್ ಆರ್ ಪಾಟೀಲ ಶಾಲೆ ಎಂದೆ ಗುರುತಿಸಿಕೊಂಡಿದೆ. ತಾಯಿಯ ಆಕಾಂಕ್ಷೆಯ ಮೆರೆಗೆ ಗುಲಗಂಜಿ ಮಠದ ಹತ್ತಿರ ಶ್ರೀ ಅಕ್ಕಮಹಾದೇವಿ ಮಂದಿರ ನಿರ್ಮಿಸಿದರು. ಎಸ್ ಆರ್ ಪಾಟೀಲ ಶಾಲೆಯ ಶತಮಾನೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ್ದ ಅಂದಿನ ಶಿಕ್ಷಣ ಸಚಿವ ಕೆ ಹೆಚ್ ರಂಗನಾಥರಿಂದ ಶೈಕ್ಷಣಿಕವಾಗಿ ಹಿಂದುಳಿದಿದ್ದ ರೋಣ ನಗರಕ್ಕೆ ಕಲಾ ವಿಜ್ಞಾನ ಮಹಾವಿದ್ಯಾಲಯಕ್ಕೆ ಮಂಜೂರಾತಿ ಪಡೆದರು. ಮಲ್ಲಾಪೂರದ ರೈಲ್ವೆ ಕೆಳ ಸೇತುವೆಯ ಕಾರ್ಯವು ಆರ್ಥಿಕ ಅಭಾವದ ಕಾರಣ ಅರ್ಧಕ್ಕೆ ಸ್ಥಗಿತವಾಗಿತ್ತು, ಇದನ್ನು ಜಿ ಎಸ್ ಪಾಟೀಲರು ಅಂದಿನ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯ್ಲಿಯವರ ಗಮನಕ್ಕೆ ತಂದು ಮುಖ್ಯಮಂತ್ರಿಗಳ ವಿಶೇಷ ಅನುದಾನದ ಅಡಿಯಲ್ಲಿ ಮೂರು ಕೋಟಿ ರೂ.ವೆಚ್ಚದಲ್ಲಿ ಈ ಕೆಳಸೇತುವೆ ಕಾರ್ಯವನ್ನು ಪೂರ್ಣಗೊಳಿಸಲಾಯಿತು. ಇದರ ಕೀರ್ತಿ ಜಿ ಎಸ್ ಪಾಟೀಲರಿಗೆ ಸಲ್ಲುತ್ತದೆ.

1989 ರ ಶಾಸಕತ್ವದ ಅವಧಿಯಲ್ಲಿ ವೀರೇಂದ್ರ ಪಾಟೀಲ, ಬಂಗಾರಪ್ಪ, ವೀರಪ್ಪ ಮೋಯ್ಲಿ ಮೂರು ಜನ ಮುಖ್ಯಮಂತ್ರಿಗಳೊಂದಿಗೆ ಹೊಂದಿದ ಉತ್ತಮ ಬಾಂಧ್ಯವದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೆ ಅತೀ ಹಿಂದುಳಿದ ರೋಣ ಮತಕ್ಷೇತ್ರದಲ್ಲಿ ಉತ್ತಮ ಅಭಿವೃದ್ದಿ ಕೆಲಸ ಕೈಗೊಂಡು ಗ್ರಾಮೀಣ ಪ್ರದೇಶದಲ್ಲಿ ವಿದ್ಯುಚ್ಛಕ್ತಿ, ಕುಡಿಯುವ ನೀರು, ಶಿಕ್ಷಣ ಆರೋಗ್ಯ, ಕೃಷಿ, ರಸ್ತೆ ಅಭಿವೃದ್ದಿ, ಸೇತುವೆ ನಿರ್ಮಾಣ, ಮಹಿಳೆಯರ ಸಬಲಿಕರಣ, ಮುಂತಾದ ಜನಪರ ಕಾರ್ಯಕ್ರಮ ಕೈಗೊಂಡು ಉತ್ತಮ ಜನನಾಯಕ ಎಂದು ಗುರುತಿಸಿಕೊಂಡರು.

1992–93 ರಲ್ಲಿ ರೋಣ ಶಹರದಲ್ಲಿ ರಾಜೀವ್ ಗಾಂಧಿ ಆಯುರ್ವೇದಿಕ್ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು ಈ ಕಾಲೇಜಿನ ಉದ್ಘಾಟನೆಗೆ ರಾಹುಲ್ ಗಾಂಧಿರವರು ಆಗಮಿಸಿದ್ದರು. ಜಿ.ಎಸ್. ಪಾಟೀಲರವರು ಈ ಕಾಲೇಜಿನ ಫೌಂಡರ್ ಚೇರಮನ್ ಆಗಿ ಕಾರ್ಯನಿರ್ವಹಿದ್ದರು. ಸಧ್ಯ ಈ ಮಹಾವಿದ್ಯಾಲಯವು ಪಿ.ಎಚ್‌ಡಿ. ಕೋರ್ಸ್ಗಳನ್ನು ಕಲಿಸುವ ಹಂತಕ್ಕೆ ಬಂದು ನಿಂತಿದೆ ಹಾಗೂ ರಾಜ್ಯದಲ್ಲಿ ಅತೀ ಉತ್ತಮ ಕಾಲೇಜಾಗಿ ಯಶಸ್ವಿಯಾಗಿದೆ. ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸ ಸಿಗಲೆಂದು ವಿವಿಧ ವಿದ್ಯಾಸಂಸ್ಥೆಗಳನ್ನು ತೆರೆದರು ಅದರಲ್ಲಿ ಕಿತ್ತೂರ ರಾಣಿ ಚೆನ್ನಮ್ಮ ವಿದ್ಯಾರ್ಥಿನಿಯವರ ಪ್ರೌಢ ಶಾಲೆ, ಬಿ.ಎಡ್. ಬಿ.ಪಿ.ಎಡ್. ಮಾತೋಶ್ರಿ ಬಸಮ್ಮ ಎಸ್ ಪಾಟೀಲ ಪ್ರಾಥಮಮಿಕ ಆಂಗ್ಲ ಮಾಧ್ಯಮ ಶಾಲೆ, ಸೇರಿದಂತೆ ಬೇರೆ ಕಡೆಯಿಂದ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಸತಿ ನಿಲಯಗಳನ್ನು ಸಹ ಪ್ರಾರಂಭಿಸಿದ್ದು ಇವರಿಗೆ ಶೈಕ್ಷಣಿಕ ರಂಗದಲ್ಲಿ ಇರುವ ಆಸಕ್ತಿಗೆ ಕೈಗನ್ನಡಿಯಾಗಿದೆ. 1995–1999ವರೆಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಕಾಂಗ್ರೆಸ್ ಪಕ್ಷದ ಸಂಘಟನೆ ಕೈಗೊಂಡು ಉತ್ತಮ ಕೆಲಸ ಮಾಡಿದರು. ಶೈಕ್ಷಣಿಕವಾಗಿ ಹಿಂದುಳಿದ ರೋಣದಂತಹ ಗ್ರಾಮೀಣ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿ "ರಾಜೀವ ಗಾಂಧಿ ಎಜುಕೇಷನ್ ಸೊಸೈಟಿ" ಸ್ಥಾಪಿಸಿ ಬಿ.ಎ.ಎಮ್.ಎಸ್, ಬಿ.ಪಿ.ಎಡ್, ಐಟಿಐ, ಕಾಲೇಜು ಪ್ರಾರಂಭಿಸಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ, ಸಾವಿರಾರು ನೀರುದ್ಯೋಗಿ ಯುವಕರಿಗೆ ಉದ್ಯೋಗ ಒದಗಿಸಿದರು. 1999 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 29,000 ಮತಗಳ ಅಂತರದಿಂದ ಜಯಬೇರಿ ಭಾರಿಸಿ 2ನೇ ಬಾರಿಗೆ ಶಾಸಕರಾದರು. ಮಲಪ್ರಭಾ ನದಿಯಿಂದ ಚೋಳಚಗುಡ್ಡ ಬ್ಯಾರೇಜ್ ನಿರ್ಮಿಸಿ ರೋಣ ನಗರಕ್ಕೆ ಪ್ರಪ್ರಥಮ ಬಾರಿಗೆ ಶುದ್ದ ಕುಡಿಯುವ ನೀರು ಪೊರೈಕೆಗೆ ಚಾಲನೆ ನೀಡಿದರು. ಹಿರೇಹಾಳ, ಕೊತಬಾಳ, ಮುಗಳಿ, ಕುರಹಟ್ಟಿ ಗ್ರಾಮಗಳಿಗೆ ಮಲಪ್ರಭಾ ನದಿಯಿಂದ ಶುದ್ದ ಕುಡಿಯುವ ನೀರು ಪೊರೈಕೆಗೆ ಮಂಜೂರಾತಿ ಪಡೆದರು. ರೋಣ ಮತಕ್ಷೇತ್ರದಲ್ಲಿ ಒಂಬತ್ತು ಲಕ್ಷಕ್ಕು ಹೆಚ್ಚು ಮನೆಗಳನ್ನು ಆಶ್ರಯ, ಅಂಬೇಡ್ಕರ, ಇಂದಿರಾ ಆವಾಸ ಜನತಾ ಕಾಲೋನಿ, ಹೆಸರಿನಲ್ಲಿ ಎಸ್ ಎಮ್ ಕೃಷ್ಣ ಮುಖ್ಯಮಂತ್ರಿಗಳ ಸಹಕಾರದಿಂದ ಪಡೆದು ಬಡವ, ದೀನ, ದುರ್ಬಲ, ಅಸಹಾಯಕರಿಗೆ ವಿತರಿಸಿದರು.

ಗಜೇಂದ್ರಗಡದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ 500 ಮನೆಗಳನ್ನು ನಿರ್ಮಿಸಿ ವಿತ–ರಿಸಿದರು ಇಂದು ಜಿ ಎಸ್ ಪಾಟೀಲ ಕಾಲೋನಿ ಎಂದೆ ಪ್ರಸಿದ್ದವಾಗಿವೆ. ಗಜೇಂದ್ರಗಡದಲ್ಲಿ ನೇಕಾರರಿಗೆ ಪ್ರತ್ಯೇಕ ಕಾಲೋನಿ ನಿರ್ಮಿಸಿದರು. ಬರಗಾಲದ ಸಮಯದಲ್ಲಿ ರಾಜ್ಯದಲ್ಲಿಯೆ ಯಾವ ಮತಕ್ಷೇತ್ರದಲ್ಲಿಯೂ ಮಾಡದ ಬರಗಾಲ ಕಾಮಗಾರಿ ಮಾಡಿದ ಕೀರ್ತಿ ಶ್ರೀ ಜಿ ಎಸ್ ಪಾಟೀಲರಗೆ ಸಲ್ಲುತ್ತದೆ. ಬರಗಾಲ ಕಾಮಗಾರಿಯಲ್ಲಿ ನಾಗೇಂದ್ರಗಡ, ದಿಂಡೂರ, ಲಕ್ಕಲಕಟ್ಟಿ, ಉಣಚಗೇರಿ, ನಾಗರಸಿಕೊಪ್ಪ, ಕುಂಟೋಜಿ, ಜಿಗೇರಿ, ಇಟಗಿ, ನೆಲ್ಲೂರ, ನಿಡಗುಂದಿ, ಅಮರಗಟ್ಟಿ, ಕಳಕಾಪೂರ, ಅಬ್ಬಿಗೇರಿ, ಶಾಂತಗಿರಿ, ಸರ್ಜಾಪೂರ, ಕಣಗಿನಹಾಳ, ಕೋಟುಮಚಗಿ, ಬೆನಕೊಪ್ಪ, ನೀರಲಗಿ, ಗಜೇಂದ್ರಗಡ, ಸೂಡಿ, ನರೇಗಲ್, ಮಾಡಲಗೇರಿ, ಹಿರೇಹಾಳ, ಕೊತಬಾಳ, ಮುಗಳಿ, ಮುದೇನಗುಡಿ, ಇನ್ನೂ ಮುಂತಾದ ಗ್ರಾಮಗಳಲ್ಲಿ ಲಕ್ಷಾಂತರ ರೂ ವೆಚ್ಚದಲ್ಲಿ ಹೊಸ ಕೆರೆಗಳ ನಿರ್ಮಾಣ ಮಾಡಿದರು. ಕೆರೆಗಳ ನಿರ್ಮಾಣದಲ್ಲಿ ರೈತ ಕೂಲಿ ಕಾರ್ಮಿಕರಿಗೆ ಉದ್ಯೋಗ ನೀಡಿ ಬರಗಾಲದ ಬವಣೆಯಿಂದ ಬಳಲುತ್ತಿದ್ದ ಜನರಿಗೆ ನೆರವಾದರು. ಅಂದಿನ ಗ್ರಾಮೀಣಾಭಿವೃದ್ದಿ ಸಚಿವ ಎಮ್.ವಾಯ್.ಘೋರ್ಪಡೆರವರು ಇವರ ಕಾರ್ಯ ಪ್ರಶಂಸಿದರು ಅಂದೆ ಇವರಿಗೆ ಸಾವಿರ ಕೆರೆಗಳ










ಸರದಾರ ಎಂದು ಕರೆದರು. ವಿದ್ಯುಚ್ಛಕ್ತಿ ಕ್ಷೇತ್ರದಲ್ಲಿ 110 ಕೆ.ವಿ ವಿದ್ಯುತ್ ವಿತರಣಾ ಘಟಕ ರೋಣ ಮತ್ತು ಗಜೇಂದ್ರಗಡಗಳಲ್ಲಿ 33 ಕೆ.ವಿ ವಿದ್ಯುತ್ ವಿತರಣಾ ಘಟಕಗಳನ್ನು ಗ್ರಾಮೀಣ ಭಾಗದ ಮುಶಿಗೇರಿ, ಹಿರೇಹಾಳ, ಹೊಳೆಆಲೂರುದಲ್ಲಿ ಸ್ಥಾಪಿಸಿ ವಿದ್ಯುತ್ ಬರದಿಂದ ರೈತರನ್ನು ರಕ್ಷಿಸಿದರು. ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷರಾಗಿ ಜಿ ಎಸ್ ಪಾಟೀಲರು ನೇಮಕಗೊಂಡರು. ರೋಣ ಭಾಗದ ರೈತರಿಗೆ ತಮ್ಮ ಕೃಷಿ ಉತ್ಪಾದನೆಗಳನ್ನು ಸಂಗ್ರಿಹಿಸಿಕೊಳ್ಳಲು 4 ಸಾವಿರ ಟನ್ ಸಾಮಾರ್ಥ್ಯದ ಬೃಹತ್ ಉಗ್ರಾಣ ಸ್ಥಾಪಿಸಿ ರೈತ–ರಿಗೆ ನೆರವಾದರು. ರೋಣ ತಾಲೂಕಿನ ಅಗ್ನಿ ಅವಘಡಕ್ಕೆ ನಾಂದಿ ಹಾಡಲು ಅಗ್ನಿಶಾಮಕ ಠಾಣೆ ಪ್ರಾರಂಬಿಸಿದರು. ರೋಣ ನಗರದಲ್ಲಿ ಯುವಜನ ಸೇವೆ ಕ್ರೀಡಾ ಇಲಾಖೆಯಿಂದ ಯುವಕರ ಕ್ರೀಡೆಗೆ ಸಹಕಾರಿಯಾಗುವ ತಾಲೂಕ ಕ್ರೀಡಾಂಗಣ ನಿರ್ಮಾಣ ಮಾಡಿದರು.

ಸರಕಾರಿ ಕಚೇರಿಗಳು ಬಾಡಿಗೆ ಕಟ್ಟದಲ್ಲಿ ಬೇರೆ ಬೇರೆ ಕಡೆ ಇರುವದನ್ನು ತಪ್ಪಿಸಲು ಮಿನಿವಿಧಾನಸೌಧ ನಿರ್ಮಿಸಿದರು. ಪುರಸಭೆ ರೋಣ ಇವರಿಗೆ ಸಂಸದರ ಅನುದಾನ ದೊರಕಿಸಿಕೊಟ್ಟು ರೋಣ ನಗರದಲ್ಲಿ ವಾಣಿಜ್ಯ ಮಳಿಗೆ ನಿರ್ಮಿಸಿ ಕೊಟ್ಟರು. ಗ್ರಾಮೀಣ ಪ್ರದೇಶದ ತೀರಾ ಹಿಂದುಳಿದ ಹಳ್ಳಿಗಳಾದ ಹಿರೇಅಳಗುಂಡಿ, ಹೊನ್ನಿಗನೂರು, ಯರೆಬೆಲೆರಿ, ಕುರಡಗಿ, ಗುಜಮಾಗಡಿಗಳಲ್ಲಿ ತಲಾ ಒಂದು ಕೋಟಿ ರೂ. ವೆಚ್ಚದಿಂದ ಬೃಹತ್ ಸೇತುವೆ ನಿರ್ಮಿಸಿ ನೂರಾರು ವರ್ಷಗಳಿಂದ ಸಾರಿಗೆ ಸಂಚಾರದಿಂದ ವಂಚಿತಾರಾಗಿದ್ದ ಈ ಗ್ರಾಮಗಳ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಕಲ್ಪಿಸಿಕೊಟ್ಟರು. ಮೇಲ್ಮಠ, ತಳ್ಳಿಹಾಳ, ಮಾಡಲಗೇರಿ, ಚಿಕ್ಕಅಳಗುಂಡಿ, ಬಾಸಾಲಾಪೂರ ಗ್ರಾಮಗಳ ಗ್ರಾಮೀಣ ರಸ್ತೆ ಸುಧಾರಿಸಿ ಪ್ರಪ್ರಥಮ ಬಾರಿಗೆ ಬಸ್ ಸಂಚಾರ ಆರಂಭಿಸಿದ ಕೀರ್ತಿ ಶ್ರೀ ಜಿ ಎಸ್ ಪಾಟೀಲರಿಗೆ ಸಲ್ಲುತ್ತದೆ. ರೋಣ, ಗಜೇಂದ್ರಗಡ, ನರೇಗಲ್ ಸರಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿ ಹಿರೇಹಾಳ, ಶಾಂತಗಿರಿ, ನರೇಗಲ್, ನಿಡಗುಂದಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಿಸಿ ಜನರಿಗೆ ಆರೋಗ್ಯ ಸೇವೆ ಕಲ್ಪಿಸಿದರು. ರೋಣ ಮತಕ್ಷೇತ್ರದಲ್ಲಿ ರಸ್ತೆ ಅಭಿವೃದ್ದಿಯಲ್ಲಿ ಕ್ರಾಂತಿಯನ್ನೆ ಉಂಟುಮಾಡಿದರು ಗದಗನಿಂದ–ರೋಣ, ನವಲಗುಂದದಿಂದ–ಗಜೇಂದ್ರಗಡ, ನರಗುಂದದಿಂದ–ಗಜೇಂದ್ರಗಡ, ಗದಗನಿಂದ–ನರೇಗಲ್ ಮಾರ್ಗವಾಗಿ ಗಜೇಂದ್ರಗಡ ರಸ್ತೆ ಅಭಿವೃದ್ದಿ. ಪ್ರದಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ನಿಡಗುಂದಿ–ಸೂಡಿ, ಇಟಗಿ–ಮುಗಳಿ, ಹಿರೇಹಾಳ–ಮುಶಿಗೇ–ರಿ,ಹೊಳೆಆಲೂರು– ಹಿರೇಹಾಳ,ನಿಡಗುಂದಿ–ಹಾಲಕೆರೆ,ಅಬ್ಬಿಗೇರಿ–ಜಕ್ಕಲಿ,ಹೊಸಳ್ಳಿ– ಇಟಗಿ, ಮುದೇನಗುಡಿ– ಹಿರೇಮಣ್ಣೂರು ಚಿಕ್ಕಮಣ್ಣೂರು,ಸವಡಿ–ಹಿರೇಮಣ್ಣೂರು, ಸವಡಿ–ಗುಜಮಾಗಡಿ, ಹೊಳೆಆಲೂರು–ಕುರಹಟ್ಟಿ–ರೋಣ, ಕುರಹಟ್ಟಿ–ಮುದೇನಗುಡಿ, ಬೆನಹಾಳ– ಹುಲ್ಲೂರ, ಗುಳಗುಳಿ–ಬೇವಿನಕಟ್ಟಿ, ಮುಶಿಗೇರಿ– ಶಾಂತಗಿರಿ–ಸರ್ಜಾಪೂರ, ಕುಂಟೋಜಿ–ಮ್ಯಾಕಲಜೇರಿ–ಬೈರಾಪೂರ–ಗುಡೂರು–ಕಾಲಕಾಲೇಶ್ವರ ರಸ್ತೆ, ಹಿರೇಹಾಳ–ಬಳಗೋಡ–ಶಾಂತಗಿರಿ, ತಳ್ಳಿಹಾಳ–ಕೊತಬಾಳ, ನಿಡಗುಂದಿಕೊಪ್ಪ–ಹಾಲಕೆರೆ, ಹಾಲಕೆರೆ ರಸ್ತೆ–ನರೆಗಲ್– ಕೊಡಿಕೊಪ್ಪ, ಕಣಗಿನಹಾಳ–ಬೆಟಗೇರಿ, ಕೊಟುಮಚಗಿ–ಲಕ್ಕುಂಡಿ ಹೀಗೆ ತಾಲೂಕಿನಾದ್ಯಂತ ಉತ್ತಮವಾದ ರಸ್ತೆಗೆ ಆದ್ಯತೆ ನೀಡಿದರು

ಶ್ರೀ ಭೀಮಾಂಭಿಕಾ ಸುಕ್ಷೇತ್ರ ಇಟಗಿ, ಶ್ರೀಕಾಲಕಾಲೇಶ್ವರ ದೇವಸ್ಥಾನ, ನೆಲ್ಲೂರು–ಪ್ಯಾಟಿ ದೇವಸ್ಥಾನಗಳ ಮಹಾದ್ವಾರ ನಿರ್ಮಿಸಿಕೊಟ್ಟರು. ರೋಣ ನಗರದಲ್ಲಿ ಬೃಹದಾಕರದ ಕನಕ ಭವನ (ಹಾಲುಮತ) ನಿರ್ಮಾಣ–ಕ್ಕೆ ಸಂಸದರ ಶಾಸಕರ ಅನುದಾನ ಸಹಾಯ ಹಸ್ತ ನೀಡಿದರು. ಮುಶಿಗೇರಿಯಲ್ಲಿ ನೇಕಾರರಿಗೆ ಶೆಡ್ಡ್ ನಿರ್ಮಿಸಿಕೊಟ್ಟರು. ರೋಣ ಮತಕ್ಷೇತ್ರದ ಶೈಕ್ಷಣಿಕ ರಂಗದಲ್ಲಿ ಮಾಡಿದ ಸಾಧನೆಗಳು ಅಪಾರವಾದವುಗಳು. ಡಿಪಿಈಪಿ ಸರ್ವ ಶೀಕ್ಷಣ ಅಭಿಯಾನ ಯೋಜನೆಯಡಿ ರೋಣ ನಗರದಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರ, ಗಜೇಂದ್ರಗಡ, ನರೇಗಲ್ಲ, ಅಬ್ಬಿಗೇರಿ, ಸೂಡಿ, ಹಿರೇಹಾಳ, ನಿಡಗುಂದಿ, ಹೊಳೆಆಲೂರು, ಮುಶಿಗೇರಿ ಗ್ರಾಮಗಳಲ್ಲಿ





ಸಮೂಹ ಸಂಪನ್ಮೂಲ ಕೇಂದ್ರಗಳು, ತಾಲೂಕಿನಾದ್ಯಂತ ಒಟ್ಟು 85 ಶಾಲಾ ಕೊಠಡಿಗಳು, ಮಕ್ಕಳಿಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು ಶೌಚಾಲಯ ಮೂತ್ರಾಲಯ ಶಾಲೆಗಳಿಗೆ ಕಂಪೌಂಡ ನಿರ್ಮಾಣ ಶಾಸಕರ ಅನುದಾನದಲ್ಲಿ ಸರಕಾರಿ ಶಾಲೆಗಳಿಗೆ ಕಂಪ್ಯೂಟರ್ ವಿತರಣೆ, ಎಲ್ಲ ಸರಕಾರಿ ಶಾಲೆಗಳಿಗೆ ವಿದ್ಯುತ್ ಸರಬರಾಜು ಶಾಲಾ ಮಕ್ಕಳಿಗೆ ಕೂಡ್ರಲು ಡೆಸ್ಕ ವಿತರಣೆ ಮುಂತಾದ ಅಭಿವೃದ್ದಿ ಕಾರ್ಯ ಕೈಗೊಂಡರು.

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಿಸಿಕೊಡಲು ಕಾಲಕಾಲೇಶ್ವರದಲ್ಲಿ ಮುರಾರ್ಜಿ ವಸತಿ ಶಾಲೆಗೆ ಕಟ್ಟಡ, ಹಿರೆಹಾಳ, ಸೂಡಿ, ರೋಣ, ಗಜೇಂದ್ರಗಡ, ನರೇಗಲ್‌ಗಳಲ್ಲಿ ಬಾಲಕ ಬಾಲಕಿಯರಿಗೆ ವಸತಿ ನಿಲಯ ಕಟ್ಟಡ ನಿರ್ಮಾಣ ಪರಿಶಿಷ್ಟ ಜಾತಿ ಜನಾಂಗದ ಬಾಲಕ ಬಾಲಕಿಯಿ–ರಿಗೆ ಪ್ರತ್ಯೇಕ ಹಾಸ್ಟೆಲ್ ನಿರ್ಮಾಣ, ಗಜೇಂದ್ರಗಡ, ರೋಣ, ನರೇಗಲ್‌ದಲ್ಲಿ ಪದವಿ ಓದುತ್ತಿರುವ ಯುವಕ ಯುವಕರಿಗೆ ಪ್ರತ್ಯೇಕವಾಗಿ ಹಾಸ್ಟೆಲ್ ಕಟ್ಟಡ ನಿರ್ಮಾಣ, ಔದ್ಯೋಗಿಕ ಶಿಕ್ಷಣಕ್ಕೆ ಒತ್ತು ನೀಡಿ ಸೂಡಿ, ಮುಶಿಗೇ–ರಿಗಳಲ್ಲಿ ಐಟಿಐ ಕಾಲೇಜುಗಳು ಪ್ರಾರಂಭ, ಹುಲ್ಲೂರು, ಮುಶೀಗೇರಿಗಳಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜ ಪ್ರಾರಂಬಿಸಿದ ಕೀರ್ತಿ ಜಿ ಎಸ್ ಪಾಟೀಲರಿಗೆ ಸಲ್ಲುತ್ತದೆ. ರೋಣ ಮತಕ್ಷೇತ್ರದಲ್ಲಿರುವ ಸರಕಾರಿ ಉರ್ದು ಪ್ರಾಥ–ಮಿಕ ಶಾಲೆಗಳು ಕಟ್ಟಡ ಸೌಲಭ್ಯವಿರದೆ ತೊಂದರೆ ಪಡುವುದನ್ನು ತಪ್ಪಿಸಲು ಪ್ರತಿ ಗ್ರಾಮದಲ್ಲಿ ಶಾಲಾ ಕೋಠಡಿ ನಿರ್ಮಾಣ ಮಾಡಿಸಿದರು. ನಿವೇಶನ ಕೊರತೆ ಇರುವ ಕಡೆ ದಾನಿಗಳನ್ನು ಗುರುತಿಸಿ ನಿವೇಶನ ಪಡೆದರು. ವಕ್ಫ ಬೋರ್ಡನಿಂದ ಅಂಜುಮನ್ ಶಿಕ್ಷಣ ಸಂಸ್ಥೆಗೆ ವಿಷೇಶ ಅನುದಾನದಲ್ಲಿ ಹೋಲಿಗೆ ಯಂತ್ರ, ಕಂಪ್ಯೂಟರಗಳನ್ನು ದೊರಕಿಸಿಕೊಟ್ಟರು. ಗಜೇಂದ್ರಗಡ ನಗರಕ್ಕೆ ಗುಡ್ಡದ ಮೇಲಿನ ನೀರು ರಭಸವಾಗಿ ಹ–ರಿದು ಬಂದು ತುಂಬಾ ತೊಂದರೆ ನೀಡುತ್ತಿತ್ತು ಅದಕ್ಕೆ ತಡೆ ಗೋಡೆ ನಿರ್ಮಿಸಿ ಅಲ್ಲಿ ಕೆರೆ ಮಾಡಿ ನೀರು ಸಂಗ್ರಹಿಸುವಂತೆ ಮಾಡಲು ಯೋಜನೆ ರೂಪಿಸಿದ ಕೀರ್ತಿ ಶ್ರೀ ಜಿ ಎಸ್ ಪಾಟೀಲರಿಗೆ ಸಲ್ಲುತ್ತದೆ.

ಜನಶ್ರೀ ಟೈಮ್ಸ್ ವಿಶೇಷ

ಗಜೇಂದ್ರಗಡ ನಗರದಲ್ಲಿ ಬಸ್ ಡಿಪೋ ನಿರ್ಮಾಣ. ರೈತರ ಬೋರವೆಲ್‌ಗೆ ಅನುಕೂಲ ಕಲ್ಪಿಸಲು ನರೇಗಲ್, ಕಣಗಿನಹಾಳ, ಗಜೇಂದ್ರಗಡ ಭಾಗದಲ್ಲಿ ಚೆಕ್ ಡ್ಯಾಮ್ ನಿರ್ಮಾಣ ಮಾಡಲಾಯಿತು. ಮಲಪ್ರಭಾ ಬಲದಂಡೆ ಕಾಲುವೆಯನ್ನು ಇಟಗಿ ಗ್ರಾಮದವರೆಗೆ ಹಿರೇಹಾಳ ಕೊತಬಾಳದವರೆಗೆ ವಿಸ್ತರಿಸಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ. ಅಂದು ಬಾಗಲಕೋಟೆ ಸಂಸದರಾಗಿದ್ದ ಶ್ರೀ ಆರ್ ಎಸ್ ಪಾಟೀಲರ ಅನುದಾನವನ್ನು ಬಳಸಿಕೊಂಡು ಇಟಗಿ ಸೂಡಿ ಮುಗಳಿ ಹಿರೇಮಣ್ಣೂರ ಶಾಂತಗಿರಿ ಸರ್ಜಾಪೂರ ಹೊಸಳ್ಳಿ ಕೊತಬಾಳ ಹಿರೇಹಾಳ ಹೊನ್ನಿಗನೂರು ನರೇಗಲ್ಲ ರಾಜೂರು ಕಣಗಿನಹಾಳ ಮುಶಿಗೇರಿ ಹೊಸರಾಂಪೂರ ಲಕ್ಕಲಕಟ್ಟಿ ಕೊಡಿಕೊಪ್ಪ ಕಂಠಿ ಬಸವೇಶ್ವರ ಜಕ್ಕಲಿ ಅಬ್ಬಿಗೇರಿ ಸವಡಿ ಬೆನಕೊಪ್ಪ ಹಾಲಕೆರೆ ಗಜೇಂದ್ರಗಡ ಮಾರನಬಸರಿ ಮುಂತಾದ ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲಾಯಿತು.

ಪರಿಶಿಷ್ಟ ಜಾತಿ ಜನಾಂಗದ ಪ್ರತಿ ಗ್ರಾಮದಲ್ಲಿ ಸಮಾಜ ಮಂದಿರ ಅಭಿವೃದ್ಧಿ ಪಡಿಸುವುದು. ಅಂಬೇಡ್ಕರ ಸಮುದಾಯ ಭವನ ನಿರ್ಮಾಣ ಎಸ್‌ಸಿ/ ಎಸ್‌ಟಿ ಜನರಿಗೆ ನಿಗಮದಿಂದ ಆರ್ಥಿಕ ನೆರವು ಒದಗಿಸಿ ಅವರ ಉದ್ಯೋಗಕ್ಕೆ ಶೆಡ್ ನಿರ್ಮಿಸಿಕೊಡಲಾಯಿತು. ರೋಣ ಮತಕ್ಷೇತ್ರದಲ್ಲಿ ಜಿ ಎಸ್ ಪಾಟೀಲರ ಶಾಸಕತ್ವದ ಅವಧಿಯಲ್ಲಿ ಕಬಡ್ಡಿ, ಕ್ರಿಕೇಟ್ ಮುಂತಾದ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಿ ಎಲ್ಲಾ ಭಾಗಗಳಲ್ಲಿ ಟೂರ್ನಾಮೆಂಟ್ ಏರ್ಪಡಸಿದ್ದಾರೆ. ರಾಜ್ಯದ ನಾನಾ ಭಾಗದಿಂದ ವಿಷೇಶ ಅನುಭವ ಇರುವ ಕ್ರೀಡಾ ಪಟುಗಳನ್ನು ಕರೆಯಿಸಿ ತರಬೇತಿ ಕೊಡಿಸಿದ್ದಾರೆ. ರೋಣ ನಗರದಲ್ಲಿ ರಾಷ್ಟ್ರ ಮಟ್ಟದ ಮುಕ್ತ ಪುರುಷ/ಮಹಿಳೆ ಹೊನಲು ಬೆಳಕಿನ ಕಬಡ್ಡಿ ಕ್ರೀಡಾಕೂಟವನ್ನು ಏರ್ಪಡಿಸಿದ್ದಾರೆ. ನರೇಗಲ್‌ದ ಗ್ರಾಮೀಣ ವಿಶ್ವವಿದ್ಯಾಲಯ ಎಂದೆ ಖ್ಯಾತಿ ಪಡೆದಿರುವ ಅನ್ನದಾನೇಶ್ವರ ಮಹಾವಿದ್ಯಾಲಯ ಅದ್ಯಕ್ಷರು ಹಾಗೂ ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಉಪಾದ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜಿ ಎಸ್ ಪಾಟೀಲರ ದೂರದರ್ಶನದ ಫಲವಾಗಿ ಮಹಾವಿದ್ಯಾಲಯಕ್ಕೆ ನ್ಯಾಕ್ ಕಮೀಟಿ ಸಂದರ್ಶನ ನೀಡಿದಾಗ ವಿಶೇಷ ಮೆಚ್ಚುಗೆ ಶಿಫಾರಸ್ಸು ಮಾಡಿದ್ದಾರೆ. ಗದಗನ ಪುಟ್ಟರಾಜ ಕವಿ ಗವಾಯಿಗಳವರ ಎಜುಕೇಷನ್ ಸೊಸೈಟಿಯ ಅಂಧರ ಶಿಕ್ಷಣ ಸಂಸ್ಥೆ





ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. 1992–93 ರಲ್ಲಿ ಮಹಿಳಾ ಶಿಕ್ಷಣಕ್ಕೆ ಒತ್ತು ಕೊಟ್ಟು ವೀರ ರಾಣಿ ಚನ್ನಮ್ಮ ಬಾಲಕಿಯರ ಪ್ರೌಡ ಶಾಲೆಯನ್ನು ಪ್ರಾರಂಭಿಸಿದರು. ಈ ಶಾಲೆಯು ಸುಸಜ್ಜಿತವಾದ ಪ್ರತ್ಯೇಕ ಕಟ್ಟಡ ಆಟದ ಮೈದಾನ ಗ್ರಂಥಾಲಯ ಮತ್ತು ಶಿಸ್ತುಬದ್ಧ ಶಿಕ್ಷಕ ಸಿಬ್ಬಂದಿ ವರ್ಗ ಎಲ್ಲವನ್ನು ಒದಗಿಸಿಕೊಟ್ಟಿದ್ದಾರೆ. 1998 ರಲ್ಲಿ ಗುರುಪಾದೇಶ್ವರ ಕೈಗಾರಿಕ ತರಬೇತಿ ಸಂಸ್ಥೆ ಪ್ರಾರಂಭಿಸಿ ಔದ್ಯೋಗಿಕ ಶಿಕ್ಷಣಕ್ಕೆ ಒತ್ತು ಕೊಟ್ಟರು. 2000–01 ರಲ್ಲಿ ಮಾತೋಶ್ರೀ ಬಸಮ್ಮ ತಾಯಿ ಪೂರ್ವ ಪ್ರಾಥಮಿಕ ಶಾಲೆ ಮತ್ತು ಕನ್ನಡ ಹಾಗೂ ಇಂಗ್ಲಿಷ ಮಾದ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಿದರು.

2004–05 ರಲ್ಲಿ ರಾಜೀವ ಗಾಂದಿ ಶಿಕ್ಷಣ ಸಂಸ್ಥೆಯಲ್ಲಿ ಬಿ.ಎಡ್ ಮತ್ತು ಡಿ.ಎಡ್ ಶಿಕ್ಷಣವನ್ನು ಪ್ರಾರಂಭಿಸಲಾಯಿತು. 2005–06 ರಲ್ಲಿ ವೀರರಾಣಿ ಚನ್ನಮ್ಮ ಸಂಯುಕ್ತ ಪದವಿ ಪೂರ್ವ ಕಾಲೇಜು ಆರಂಭ 48. 2006–07 ರಲ್ಲಿ ಒಳ್ಳೆಯ ಗುಣಮಟ್ಟವುಳ್ಳ ರಾಷ್ಟ್ರಮಟ್ಟದಲ್ಲಿ ಜಯ ಸಾಧಿಸುವಂತ ಕ್ರೀಡಾಪಟುಗಳನ್ನು ತಯಾರಿಸುವ ಉದ್ದೇಶದೊಂದಿಗೆ ದೈಹಿಕ ಶಿಕ್ಷಣ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. 2007–08 ರಲ್ಲಿ ಧಾರವಾಡದಲ್ಲಿ ಬಿಬಿಎ & ಬಿಸಿಎ ಕೋರ್ಸುಗಳ ಕಾಲೇಜನ್ನು ಪ್ರಾರಂಭಿಸಲಾಯಿತು. ಇವರ ಅವಧಿಯಲ್ಲಿ ರೋಣ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ–ಹೊಳೆಆಲೂರು, ಧಾರವಾಡ ಜಿಲ್ಲಾ 4ನೇ ಕನ್ನಡ ಸಾಹಿತ್ಯ ಸಮ್ಮೇಳನ ರೋಣ, ನೂತನ ಗದಗ ಜಿಲ್ಲಾ ಪ್ರಥಮ ಶರಣ ಸಾಹಿತ್ಯ ಸಮ್ಮೇಳನ–ಹೊಳೆ ಆಲೂರುಗಳಲ್ಲಿ ನಡೆದವು. ಕರ್ನಾಟಕ ರಾಜ್ಯದ ಉಗ್ರಾಣ ನಿಗಮದ ಅದ್ಯಕ್ಷರಾಗಿದ್ದ ಅವಧಿಯಲ್ಲಿ 2002 ರಲ್ಲಿ ಸಿಲೋಸ್ ಮಾದರಿಯಲ್ಲಿ 10,000 ಟನ್ ಧಾನ್ಯ ಸಂಗ್ರಹದ 16 ಉಗ್ರಾಣಗಳನ್ನು ನಿರ್ಮಿಸಲಾಯಿತು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿ–ಕ ಕಳಕಳಿ ಹೊಂದಿದ ಅಪ್ರತಿಮ ಜನನಾಯಕ ಮತ್ತು ಕ್ರೀಯಾಶೀಲ ವ್ಯಕ್ತಿಯಾಗಿದ್ದಾರೆ. 2013ರ ಕರ್ನಾಟಕ ವಿಧಾನಸಭೆ ನಡೆದ ಚುನಾವಣೆಯಲ್ಲಿ ಬೃಹತ್ ಮತಗಳ ಅಂತರದಿಂದ ಸಚಿವರೊಬ್ಬರನ್ನು ಸೋಲಿಸಿ ಮತ್ತೊಮ್ಮೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2018ರ ವಿಧಾನಸಭೆ ಚುನಾವಣೆಯಲ್ಲಿ ಜಯಗಳಿಸಲು ಸಾಧ್ಯವಾಗಲಿಲ್ಲವಾದರೂ ಹೈಕಮಾಂಡರ ಆದೇಶದ ಮೇರೆಗೆ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿರುತ್ತಾರೆ.

2018 ರಲ್ಲಿ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗಳು ನಿರ್ದೇಶಿಸಿದಂತೆ ಎಲ್ಲಾ ಕಾರ್ಯಗಳನ್ನು ಯಶಸ್ವಿಗೊಳಿಸಿ, ಗದಗ ಜಿಲ್ಲೆಯಾದ್ಯಂತ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಗದಗ ಜಿಲ್ಲೆಗೆ ಸಂಬಂಧಿಸಿದ 4 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳನ್ನು ಗೆಲ್ಲಿಸುವ ಭರವಸೆ ಇದೆ. 54. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಈ ಕೆಳಕಂಡ ಪ್ರದೇಶಗಳಲ್ಲಿ ಉಸ್ತುವಾರಿ/ಸಂಯೋಜಕರು ಅಂತಾ ನೇಮಕ ಮಾಡಿದ್ದು, ಸದರಿ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಗೆಲ್ಲಸಿದ ಕೀರ್ತಿ ಜಿ.ಎಸ್. ಪಾಟೀಲ ರವರಿಗೆ ಸಲ್ಲುತ್ತದೆ. 2018 ರಲ್ಲಿ ಶಾಸರಾಗಿದ್ದ ಸಿ.ಎಸ್. ಶಿವಳ್ಳಿ ರವರು ಮರಣ ಹೊಂದಿದಾಗ ಕುಂದಗೋಳ ಉಪಚುನಾವಣೆಯಲ್ಲಿ ಇವರ ಪತ್ನಿಯವರಾದ ಕುಸುಮಾ ಶಿವಳ್ಳಿ ಇವರು ಅಭ್ಯರ್ಥಿಯಾಗಿ ಕಣಕ್ಕಿಳಿದ್ದರು, ಈ ಸಂದರ್ಭದಲ್ಲಿ ಕುಂದಗೋಳ ವಿಧಾನಸಭಾ ಕ್ಷೇತ್ರದ ಸಂಶಿ ಜಿಲ್ಲಾ ಪಂಚಾಯಿತಿಗೆ ಉಸ್ತುವಾ–ರಿಗಳನ್ನಾಗಿ ನೇಮಕ ಮಾಡಲಾಗಿತ್ತು. ಸಂಶಿ ಜಿಲ್ಲಾ ಪಂಚಾಯಿತಿಯಿಂದ ಅತ್ಯಧಿಕ ಮತಗಳನ್ನು ಗಳಿಸುವುದರೊಂದಿಗೆ ಶ್ರೀಮತಿ ಕುಸುಮಾ ಶಿವಳ್ಳಿ ಇವರನ್ನು ಶಾಸಕರನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. 2019 ರಲ್ಲಿ ಹಾವೇರಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳಾದ ಡಿ. ಆರ್. ಪಾಟೀಲ ರವರ ಪರವಾಗಿ ಲೋಕಸಭಾ ಕ್ಷೇತ್ರದ ಉದ್ದಗಲಕ್ಕೂ ಸಂಚರಿಸಿ ಶ್ರೀ ಡಿ.ಆರ್. ಪಾಟೀಲ ರವರ ಪರವಾಗಿ ಮತಯಾಚನೆ ಮಾಡಿದ್ದರು. 2020 ರಲ್ಲಿ ಹಾವೇರಿ ವಿಧಾನಸಭಾ ಕ್ಷೇತ್ರದ ಬಂಕಾಪೂರ ಪುರಸಭೆ ಚುನಾವಣೆಯಲ್ಲಿ ಉಸ್ತುವಾರಿಗಳಾಗಿ ಪ್ರಮುಖ ಪಾತ್ರವಹಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಪ್ರಚಂಡ ಬಹುಮತದಿಂದ ಗೆಲ್ಲಿಸಿದ ಕೀರ್ತಿ ಜಿ.ಎಸ್. ಪಾಟೀಲ ರವರಿಗೆ ಸಲ್ಲುತ್ತದೆ. 2021 ರಲ್ಲಿ ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಉಸ್ತುವಾರಿಗಳಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾದ ಶ್ರೀನಿವಾಸ್ ಮಾನೆ ಅವರನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. 2021 ರಲ್ಲಿ ಜರುಗಿದ ಧಾರವಾಡ ವಿಧಾನ ಪರಿಷತ್ ಚುನಾವಣೆಯಲ್ಲಿ ಸಂಂ–ಯೋಜಕರಾಗಿ ಕಾರ್ಯನಿರ್ವಹಿಸಿದ್ದು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಸಲೀಂ ಅಹ್ಮದ ರವರನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. 2021 ರಲ್ಲಿ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸವದತ್ತಿ ತಾಲೂಕಿನ ಉಸ್ತುವಾರಿಗಳಾಗಿ ಕಾರ್ಯನಿರ್ವಹಿಸಿರುತ್ತಾರೆ. ಗದಗ ವಿಧಾನಸಭಾ ಕ್ಷೇತ್ರದ ಅಣ್ಣಿಗೇರಿ ಪುರಸಭೆಯ ಅಧ್ಯಕ್ಷರ ಚುನಾವಣೆಯಲ್ಲಿ ಉಸ್ತುವಾರಿಗಳಾಗಿ ಕಾರ್ಯನಿರ್ವಹಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಅಧ್ಯಕ್ಷರನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ನವಲಗುಂದ ಪುರಸಭೆಯ ಚುನಾವಣೆಯಲ್ಲಿ ಉಸ್ತುವಾರಿಗಳಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಪ್ರಚಂಡ ಬಹುಮತದಿಂದ ಆರಿಸಿ ತರುವಲ್ಲಿ ಶ್ರಮಿಸಿರುತ್ತಾರೆ. 2021ರಲ್ಲಿ ಪುತ್ರ ಮಿಥುನ್ ಪಾಟೀಲ ರವರ ಹುಟ್ಟುಹಬ್ಬದ ಅಂಗವಾರಿ ರೋಣ ಶಹರದ ಕ್ರಿಡಾಂಗಣದಲ್ಲಿ ಆರ್ಮಿ ಹಾಗೂ ಪೋಲೀಸ್ ತರಬೇತಿ ಶಿಬರವನ್ನು ಸುಮಾರು 1 ವಾರಗಳ ಕಾಲ ಆಯೋಜಿಸಿದ್ದರು. ಇದರಿಂದ ಬಹಳಷ್ಟು ಯುವಕರು ಭಾರತೀಯ ಸೇನೆಯಲ್ಲಿ ಹಾಗೂ ಪೋಲೀಸ್ ಇಲಾಖೆಯಲ್ಲಿ ಸೇರ್ಪಡೆಗೊಂಡರು ಇದರ ಕೀರ್ತಿ ಶ್ರೀ ಜಿ.ಎಸ್. ಪಾಟೀಲರವರಿಗೆ ಸಲ್ಲುತ್ತದೆ. ಎ.ಐ.ಸಿ.ಸಿ. ಹಾಗೂ ಕೆ.ಪಿ.ಸಿ.ಸಿ. ಯ ಮಹತ್ವವಾದ ಯೋಜನೆಯಾದ ಕಾಂಗ್ರೆಸ್ ಪಕ್ಷದ ಡಿಜಿಟಲ್ ಸದಸ್ಯತ್ವ ನೊಂದಣಿಯು ಅತ್ಯಂತ ಯಶಸ್ವಿಯಾಗಿದ್ದು, ರೋಣ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯ ನೊಂದಣಿದಾರರ ಮೂಲಕ ಸುಮಾರು 35000 ಕ್ಕೂ ಹೆಚ್ಚು ಡಿಜಿಟಲ್ ಸದಸ್ಯತ್ವ ಹಾಗೂ 4000ಕ್ಕೂ ಅಧಿಕ ಮ್ಯಾನುವಲ್ ಸದಸ್ಯತ್ವ ನೊಂದಣಿಗಳು ಒಟ್ಟಾರೆಯಾಗಿ ಸುಮಾರು 39000 ಸಾವಿರ ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೊಂದಣಿಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ. ಅಷ್ಟೇ ಅಲ್ಲದೇ ರೋಣ ವಿಧಾನ ಸಭಾ ಕ್ಷೇತ್ರದ ಡಂಬಳ ಗ್ರಾಮದಲ್ಲಿ 30/02/2020 ರಂದು ಗ್ರಾಮ ವಾಸ್ತವ್ಯ ಮಾಡಿ ಜನರ ಸ್ಪಂದನೆಗಳಿಗೆ ಉತ್ತರಿಸಿರುತ್ತಾರೆ. ಮಾರ್ಚ್ 2020 ರಲ್ಲಿ ಕೊರೋನಾ ಮಹಾಮಾರಿ ಆವರಿಸಿದ ಸಂದರ್ಭದಲ್ಲಿ ನಿರ್ಗತಿಕರಿಗೆ ಅಕ್ಕಿ, ಬೆಳೆ, ಎಣ್ಣೆ, ಇನ್ನೂ ಮುಂತಾದ ಆಹಾರ ಪದಾರ್ಥಗಳನ್ನು ವಿತರಿಸಿದ್ದು, ರೋಣ ಮತಕ್ಷೇತ್ರದಾದ್ಯಂತ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಇಮ್ಯೂನಿಟಿ ಬೂಸ್ಟರ್ ಕಿಟ್‌ಗಳನ್ನು ನೀಡಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸಹಾಯ ಮಾಡಲಾಗಿದೆ. "ಆರೋಗ್ಯ ಹಸ್ತ" ಕಾರ್ಯಕ್ರಮದಡಿ ಗ್ರಾಮೀಣ ಭಾಗದ ಜನರಿಗೆ ಮುಂಜಾಗ್ರತೆಯಾಗಿ ಮಾತ್ರೆಗಳ ಕಿಟ್‌ಗಳನ್ನು ಒದಗಿಸಲಾಗಿದೆ. ಕೊರೊನಾ ರೋಗಿಗಳಿಗೆ ಗದಗ ಜಿಲ್ಲೆಯಾದ್ಯಂತ 4 ಉಚಿತ ಆಂಬ್ಯುಲೆನ್ಸ್ ಸೇವೆ ಸೇರಿದಂತೆ ರೋಣ ಶಹರದ ಆಯುರ್ವೇದಿಕ ಮಹಾವಿದ್ಯಾಲಯದಲ್ಲಿ ಕೊರೊನಾ ರೋಗಿಗಳಿಗೆ ಚಿಕಿತ್ಸೆಗೆಂದು 25 ವೆಂಟಿಲೇಟರ್ ಬೆಡ್‌ಗಳು, 25 ಸಾಮಾನ್ಯ ಬೆಡ್‌ಗಳು ಸೇರಿದಂತೆ 50 ಹಾಸಿಗೆಗಳ ಕೊವಿಡ್ ಆಸ್ಪತ್ರೆಯನ್ನೆ ತೆರೆಯಲಾಗಿತ್ತು, ಈ ಆಸ್ಪತ್ರೆಯಲ್ಲಿ ಸಾಕಷ್ಟು ಕೊರೊನಾ ರೋಗಿಗಳು ಉಚಿತವಾಗಿ ಚಿಕಿತ್ಸೆ ಪಡೆದಿರುತ್ತಾರೆ.

ಸದ್ಯ ಜಿ.ಎಸ್. ಪಾಟೀಲ ಸೇವಾ ತಂಡಗಳನ್ನು ರಚನೆ ಮಾಡಿ ರೋಣ ಮತಕ್ಷೇತ್ರದ ಪ್ರತಿ ಬೂತ್ ಮಟ್ಟದಲ್ಲಿ ಸೇವಾ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಕಣ್ಣಿನ ತೊಂದರೆ, ಹೃದಯ ಸಂಬಂಧಿ ಖಾಯಿಲೆಗಳು ಹಾಗೂ ಇನ್ನಿತರ ಖಾಯಿಲೆಗಳನ್ನು ಗುರುತಿಸಿ ಅವರಿಗೆ ಸೂಕ್ತವಾದ ಚಿಕಿತ್ಸೆ ಲಭಿಸುವಂತೆ ಮಾಡಿದೆ. ಹಾಗೂ ಸರಕಾರದ ಸಿಗುವ ಸೌಲಭ್ಯಗಳಿಂದ ವಂಚಿತರಾದವರವನ್ನು ಗುರುತಿಸುವ ಕಾರ್ಯ ಪ್ರಾರಂಭಸಿ ಸರ್ವೇ ಕಾರ್ಯ ಮುಗಿಯುವ ಹಂತದಲ್ಲಿದೆ. ಈಗಾಗಲೇ ಗುರುತಿಸಿದವರ ಪಟ್ಟಿಯನ್ನು ಮಾಡಿ ಫಲಾನುಭವಿಗಳಿಗೆ ಉಚಿತವಾಗಿ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸೆ ಹೃದಯ ರೋಗ ಖಾಯಿಲೆಗೆ ರಾಜೀವ್ ಗಾಂಧಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪ್ರಾರಂಭಿಸಲಾಗಿದೆ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101. Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101. email: janashreetimes@gmail.com